# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ
## ಬೆಂಗಳೂರು

**ಹೆಚ್.ಆರ್.ಸಿ.ಸಂಖ್ಯೆ: 3763/10/20/2020(SB–3)**

**ದಿನಾಂಕ: 12–04–2022**

**ಉಪಸ್ಥಿತರು: ಶ್ರೀ ಆರ್.ಕೆ.ದತ್ತ, ಮಾನ್ಯ ಸದಸ್ಯರು**

**ದೂರುದಾರರು:**

ಶ್ರೀಮತಿ ನೇತ್ರಾವತಿ ಕೋಂ ಶೆಟ್ಟಳಯ್ಯ
ಬಿನ್ ಲೇಟ್ ಕೃಷ್ಣಪ್ಪ,
11ನೇ ಅಡ್ಡ ರಸ್ತೆ, ಶ್ರೀನಗರ,
ತುಮಕೂರು ಜಿಲ್ಲೆ

## ಆದೇಶ

ಶ್ರೀಮತಿ ನೇತ್ರಾವತಿ ಕೋಂ ಶೆಟ್ಟಳಯ್ಯ ರವರು ಆಯೋಗಕ್ಕೆ ಸಲ್ಲಿಸಿರುವ ದೂರಿನಲ್ಲಿ, ತಾವು ಸುಜಾತ ರವರ ಮಾಲೀಕತ್ವದ 11 ನೇ ಕ್ರಾಸ್, ಶ್ರೀನಗರ, ತುಮಕೂರು ಇಲ್ಲಿರುವ ಮನೆಯನ್ನು ರೂ.50,000/–ಗಳಿಗೆ ಭೋಗ್ಯಕ್ಕೆ ಪಡೆದು ಸದರಿ ಮನೆಯಲ್ಲಿ ವಾಸವಾಗಿದ್ದು, ನಂತರ ಸುಜಾತ ರವರು ಸದರಿ ಮನೆಗೆ ರೂ.2000/–ಗಳನ್ನು ಬಾಡಿಗೆ ನೀಡಿ ಇಲ್ಲವಾದರೇ ಮನೆ ಖಾಲಿ ಮಾಡಬೇಕೆಂದು ತಕರಾರು ಮಾಡಿದ್ದರಿಂದ ನಮ್ಮಗಳ ಮಧ್ಯೆ ಮಾತಿಗೆ ಮಾತು ಬೆಳೆದು ಕ್ಯಾತಸಂದ್ರ ಪೊಲೀಸ್ ಠಾಣೆಯಲ್ಲಿ ಪರಸ್ಪರ ದೂರು ದಾಖಲಾಗಿರುತ್ತದೆ. ತದನಂತರ ಸುಜಾತರವರ ಯಜಮಾನರು ಮನೆಯ ಬಳಿ ಬಂದು ಮನೆ ಖಾಲಿ ಮಾಡಿ ಇಲ್ಲವಾದರೆ ನಿಮ್ಮನ್ನು ಕೊಲೆ ಮಾಡಿಸುತ್ತೇವೆಂದು ಜೀವ ಬೆದರಿಕೆ ಹಾಕಿರುತ್ತಾರೆ. ನಂತರ ಅದೇ ದಿನ ಸಂಜೆ ಕ್ಯಾತಸಂದ್ರ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಮಂಜುಳ ರವರು ತಮ್ಮ ಮನೆ ಬಳಿ ಬಂದು ತಮಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಠಾಣೆಗೆ ಬರುವಂತೆ ತಿಳಿಸಿ ಹೋಗಿದ್ದು, ತನ್ನ ತಂಗಿ ಪವಿತ್ರಾಳಿಗೂ ಸಹ ಬೆದರಿಕೆ ಹಾಕಿ ಹೋಗಿದ್ದರಿಂದ ಸದರಿ ಮಂಜುಳರವರ ಕಿರುಕುಳದ ವಿರುದ್ಧ ತುಮಕೂರಿನ ಎಸ್‌ಪಿ ಸಾಹೇಬರಿಗೆ ದೂರು ನೀಡಿರುತ್ತೇವೆ. ತುಮಕೂರಿನ ಎಸ್.ಪಿ ಸಾಹೇಬರು ಕ್ಯಾತಸಂದ್ರ ಸರ್ಕಲ್ ಇನ್ಸ್‌ಪೆಕ್ಟರ್ ರವರಿಗೆ ವಿಚಾರಣೆ ಮಾಡುವಂತೆ ಆದೇಶ ಮಾಡಿದ್ದು, ಸದರಿ ಅರ್ಜಿಯ ವಿಚಾರಣೆಯ ಸಲುವಾಗಿ ತಾನು, ತನ್ನ ತಂಗಿ ಪವಿತ್ರ ಮತ್ತು ತಮ್ಮ ತಾಯಿ ನಾಗರತ್ನಮ್ಮ ರವರು ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀ ಚನ್ನೇಗೌಡ ರವರ ಕಚೇರಿಯ ಬಳಿ ಹೋದಂತಹ ಸಂದರ್ಭದಲ್ಲಿ ತನ್ನ ತಂಗಿ ಪವಿತ್ರರವರು ಕ್ಯಾತಸಂದ್ರದಲ್ಲಿ ಇಟ್ಟುಕೊಂಡಿದ್ದ ಹೂವಿನ ಅಂಗಡಿಯನ್ನು ದೌರ್ಜನ್ಯದಿಂದ ತೆರವುಗೊಳಿಸಿರುತ್ತಾರೆ. ಸದರಿ ಸರ್ಕಲ್ ಇನ್ಸ್‌ಪೆಕ್ಟರ್ ರವರು ಕ್ಯಾತ್ಸಂದ್ರ ಠಾಣೆಗೆ ಕರೆ ಮಾಡಿ ಎಸ್‌ಐ ಮಂಜುಳ ರವರನ್ನು ಕರೆಸಿಕೊಂಡು ಇವರುಗಳು ನಿನ್ನ ವಿರುದ್ಧ ಎಸ್‌ಪಿ ಸಾಹೇಬರಿಗೆ ದೂರು ನೀಡಿರುತ್ತಾರೆ. ಇವರುಗಳನ್ನು ಚೆನ್ನಾಗಿ ಬೆಂಡೆತ್ತಿ ಐದಾರು ಎಫ್‌ಐಆರ್ ದಾಖಲು ಮಾಡಿ, ರೌಡಿ ಶೀಟರ್ ಓಪನ್ ಮಾಡು ಎಂದು ಮಂಜುಳ ರವರ ಜೊತೆಯಲ್ಲಿ ತಮ್ಮನ್ನು ಕಳುಹಿಸಿದರು. ಸದರಿ ಮಂಜುಳ ರವರು ಸರ್ಕಲ್ ಇನ್ಸ್‌ಪೆಕ್ಟರ್ ಕಚೇರಿ ಆವರಣದಲ್ಲಿಯೇ ತಮ್ಮಗಳ ಮೇಲೆ ದೈಹಿಕವಾಗಿ ಹಲ್ಲೆ ಮಾಡಿ ಜೀಪಿನಲ್ಲಿ ಕ್ಯಾತ್ಸಂದ್ರ ಠಾಣೆಗೆ ಕರೆದುಕೊಂಡು ಹೋಗಿ, ಠಾಣೆ ಬಳಿ ಹೋದ ತಕ್ಷಣ ಜೀಪಿನಿಂದ

ಇಳಿಯುತ್ತಿದ್ದಂತೆ ಪಿಎಸ್ಐ ಮಂಜುಳ ರವರು ತನಗೂ ಮತ್ತು ತನ್ನ ತಂಗಿ ಪವಿತ್ರಾಳಿಗೂ ಅವಾಚ್ಯ ಶಬ್ದಗಳಿಂದ ನಿಂದಿಸಿ, ಗರ್ಭಿಣಿಯಾಗಿದ್ದ ತನ್ನ ತಂಗಿಯ ಮೇಲೂ ದೈಹಿಕವಾಗಿ ಹಲ್ಲೆ ಮಾಡಿದ್ದರಿಂದ ತನ್ನ ತಂಗಿ ತುಮಕೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ದಿನಾಂಕ:05.10.2020 ರಿಂದ ದಿನಾಂಕ:07.10.2020 ರವರೆಗೂ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ತಾನು ಮತ್ತು ತನ್ನ ಕುಟುಂಬದವರು ಯಾವುದೇ ತಪ್ಪು ಮಾಡದಿದ್ದರೂ ಸಹ ಕ್ಯಾತಸಂದ್ರ ಪೊಲೀಸ್ ಠಾಣೆ ಪಿಎಸ್ಐ ಮಂಜುಳರವರು ತಮ್ಮಗಳ ಮೇಲೆ ವಿನಾಕಾರಣ ದೈಹಿಕವಾಗಿ ಹಲ್ಲೆ ಮಾಡಿ ಕಿರುಕುಳ ನೀಡಿರುತ್ತಾರೆ. ಇದೇ ನೋವಿನಲ್ಲಿ ತಮ್ಮ ತಂದೆಯವರು ಮರಣ ಹೊಂದಿರುತ್ತಾರೆ. ಆದ್ದರಿಂದ ಈ ಬಗ್ಗೆ ವಿಚಾರಣೆ ಮಾಡಿ ಕ್ಯಾತಸಂದ್ರ ಪೊಲೀಸ್ ಠಾಣೆಯ ಪಿಎಸ್ಐ ಮಂಜುಳ ರವರ ವಿರುದ್ದ ಕಾನೂನು ಕ್ರಮ ಕೈಗೊಳ್ಳಬೇಕೆಂದು ಇತ್ಯಾದಿಯಾಗಿ ಕೋರಿದ್ದಾರೆ.

ದೂರರ್ಜಿಯ ಬಗ್ಗೆ ವಿಚಾರಣೆ ನಡೆಸಿ ಆಯೋಗಕ್ಕೆ ವರದಿ ಸಲ್ಲಿಸುವಂತೆ ಆಯೋಗದ ಪೊಲೀಸ್ ಮಹಾನಿರ್ದೇಶಕರಿಗೆ ಆದೇಶಿಸಲಾಗಿದ್ದು, ಅದರಂತೆ ಆಯೋಗದ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ರವರು ಈ ಕೆಳಕಂಡಂತೆ ಆಯೋಗಕ್ಕೆ ವರದಿ ಸಲ್ಲಿಸಿದ್ದಾರೆ:

"ದೂರುದಾರರು ನೀಡಿರುವ ದೂರರ್ಜಿಗೆ ಸಂಬಂಧಿಸಿದಂತೆ ಪ್ರಕರಣದ ವಿಚಾರಣಾ ಕಾಲದಲ್ಲಿ ಪಡೆದ ಹೇಳಿಕೆಗಳು ಹಾಗೂ ದಾಖಲಾತಿಗಳಿಂದ ಕಂಡು ಬಂದ ಅಂಶವೇನೆಂದರೆ, ಅರ್ಜಿದಾರರಾದ ಶ್ರೀಮತಿ ನೇತ್ರಾವತಿರವರಿಗೂ ಹಾಗೂ ಅವರ ಮನೆ ಮಾಲೀಕರಾದ ಶ್ರೀಮತಿ ಸುಜಾತರವರಿಗೂ ಮನೆ ಅಡ್ವಾನ್ಸ್ ಹಾಗೂ ಬಾಡಿಗೆ ಹಣದ ವಿಚಾರವಾಗಿ ನಡೆದ ಗಲಾಟೆ ಸಂಬಂಧ ಮನೆ ಮಾಲೀಕರಾದ ಶ್ರೀಮತಿ ಸುಜಾತ ರವರು ಕ್ಯಾತಸಂದ್ರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಈ ಸಂಬಂಧ ಪಿ.ಎಸ್.ಐ ಶ್ರೀಮತಿ ಮಂಜುಳ ರವರು ದಿನಾಂಕ:30-09-2020 ರಂದು ಅರ್ಜಿದಾರರಾದ ಶ್ರೀಮತಿ ನೇತ್ರಾವತಿ ರವರ ಮನೆ ಬಳಿ ಹೋಗಿ ವಿಚಾರಣೆಗೆ ಹಾಜರಾಗಲು ಮೌಖಿಕವಾಗಿ ತಿಳಿಸಿ ಬಂದಿರುತ್ತಾರೆ. ಆದರೆ ಅರ್ಜಿದಾರರು ಠಾಣೆಗೆ ಬರದೇ ದಿನಾಂಕ: 03-10-2020 ರಂದು ಅರ್ಜಿದಾರರಾದ ಶ್ರೀಮತಿ ನೇತ್ರಾವತಿ ರವರು ತನ್ನ ತಂಗಿ ಪವಿತ್ರ ಹಾಗೂ ತಾಯಿ ಶ್ರೀಮತಿ ನಾಗರತ್ನಮ್ಮ ರವರೊಂದಿಗೆ ಪೊಲೀಸ್ ಅಧೀಕ್ಷಕರು ತುಮಕೂರು ಜಿಲ್ಲೆ ರವರಿಗೆ ಪಿ.ಎಸ್.ಐ ಶ್ರೀಮತಿ ಮಂಜುಳ ರವರ ವಿರುದ್ದ ಕ್ರಮ ಕೈಗೊಳ್ಳುವಂತೆ ದೂರು ಅರ್ಜಿ ಸಲ್ಲಿಸಿರುತ್ತಾರೆ. ಪೊಲೀಸ್ ಅಧೀಕ್ಷಕರು ತುಮಕೂರು ಜಿಲ್ಲೆರವರು ಸದರಿ ದೂರು ಅರ್ಜಿಯನ್ನು ವಿಚಾರಣೆ ಮಾಡಿ ವರದಿ ನೀಡುವಂತೆ ವೃತ್ತ ನಿರೀಕ್ಷಕರು, ಕ್ಯಾತಸಂದ್ರ ವೃತ್ತ ರವರಿಗೆ ಕಳುಹಿಸಿ ಕೊಟ್ಟಿರುತ್ತಾರೆ. ದಿನಾಂಕ: 05.10.2020 ರಂದು ವೃತ್ತ ನಿರೀಕ್ಷಕರಾದ ಶ್ರೀ ಚನ್ನೇಗೌಡರವರು ಸದರಿ ದೂರು ಅರ್ಜಿಯ ವಿಚಾರಣೆಗೆ ಅರ್ಜಿದಾರರಾದ ಶ್ರೀಮತಿ ನೇತ್ರಾವತಿ ಹಾಗೂ ಎದುರು ಅರ್ಜಿದಾರರಾದ ಶ್ರೀಮತಿ ಮಂಜುಳ ಪಿ.ಎಸ್.ಐ ಹಾಗೂ ಮನೆ ಮಾಲೀಕರಾದ ಶ್ರೀಮತಿ ಸುಜಾತ ರವರನ್ನು ಅವರ ಕಛೇರಿಗೆ ಕರೆಯಿಸಿ ವಿಚಾರಣೆ ಮಾಡಿದ್ದು, ಅರ್ಜಿದಾರರು ಅರ್ಜಿ ವಿಚಾರಣೆಗೆ ಸಹಕರಿಸದೇ, ವೃತ್ತ ನಿರೀಕ್ಷಕರ ಕಛೇರಿಯಲ್ಲಿ ಗಲಾಟೆ ಮಾಡಿದ್ದರಿಂದ ಇವರನ್ನು ಠಾಣೆಗೆ ಕರೆದುಕೊಂಡು ಹೋಗಿ ಎರಡೂ ಪಾರ್ಟಿಗಳಿಂದ ದೂರನ್ನು ಪಡೆದು ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳುವಂತೆ ಸೂಚಿಸಿದ ಮೇರೆಗೆ ಕ್ಯಾತಸಂದ್ರ ಪೊಲೀಸ್ ಠಾಣೆಯ ಪಿಎಸ್ಐ ಶ್ರೀಮತಿ ಮಂಜುಳಾ ರವರು ಅರ್ಜಿದಾರರಾದ ಶ್ರೀಮತಿ ನೇತ್ರಾವತಿ ಅವರ ತಾಯಿ ಹಾಗೂ ತಂಗಿಯನ್ನು ಮತ್ತು ಮನೆ ಮಾಲೀಕರಾದ ಶ್ರೀಮತಿ ಸುಜಾತ ರವರನ್ನು ಕ್ಯಾತಸಂದ್ರ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದಿದ್ದು, ಅರ್ಜಿದಾರರು ಹಾಗೂ ಅವರ ತಂಗಿ ಪವಿತ್ರ ಮತ್ತು ತಾಯಿ ಶ್ರೀಮತಿ ನಾಗರತ್ನಮ್ಮ ರವರು ಜೀಪ್‌ನಿಂದ

ಇಳಿಯುತ್ತಿದ್ದಂತೆ ಠಾಣೆಗೆ ದೂರು ನೀಡಲು ಠಾಣೆಯ ಒಳಗೆ ಬರದೇ ಆವರಣದಲ್ಲಿಯೇ ಪಿ.ಎಸ್.ಐ ಶ್ರೀಮತಿ ಮಂಜುಳರವರೊಂದಿಗೆ ಪರಸ್ಪರ ತಳ್ಳಾಟ ಮಾಡಿರುತ್ತಾರೆ ಹಾಗೂ ಠಾಣೆಯ ಒಳಗೆ ಬಂದು ದೂರು ನೀಡಿರುವುದಿಲ್ಲ. ಆದರೆ ಮನೆ ಮಾಲೀಕರಾದ ಶ್ರೀಮತಿ ಸುಜಾತ ರವರು ದೂರುದಾರರ ವಿರುದ್ದ ದೂರು ನೀಡಿದ್ದರ ಮೇರೆಗೆ ಠಾಣಾ ಮೊ.ಸಂ:188/2020 ಕಲಂ 341, 323, 427, 448, 504, 506 ರೆ/ವಿ 34 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುವುದು ನಂತರ ಅರ್ಜಿದಾರರು ತನ್ನ ತಂಗಿ ಶ್ರೀಮತಿ ಪವಿತ್ರಾಳನ್ನು ತುಮಕೂರು ಸರ್ಕಾರಿ ಜಿಲ್ಲಾ ಆಸ್ಪತ್ರೆಗೆ ಒಳರೋಗಿಯಾಗಿ ದಾಖಲು ಮಾಡಿ ದಿನಾಂಕ: 05-10-2020 ರಿಂದ 07-10-2020 ರವರೆಗೆ ಚಿಕಿತ್ಸೆ ಕೊಡಿಸಿರುವುದಾಗಿ ವಿಚಾರಣೆ ಸಮಯದಲ್ಲಿ ಪಡೆದ ಹೇಳಿಕೆಗಳಿಂದ ತಿಳಿದು ಬಂದಿರುತ್ತದೆ.

ತುಮಕೂರು ಸರ್ಕಾರಿ ಜಿಲ್ಲಾ ಆಸ್ಪತ್ರೆಯ ದಾಖಲಾತಿಗಳನ್ನು ಪರಿಶೀಲಿಸಲಾಗಿ, ದೂರುದಾರರ ತಂಗಿ ಶ್ರೀಮತಿ ಪವಿತ್ರಾರವರನ್ನು ಆಸ್ಪತ್ರೆಗೆ ದಾಖಲಿಸುವಾಗ ಕ್ಯಾತಸಂದ್ರ ಪೊಲೀಸ್ ಠಾಣೆಯ ಪೊಲೀಸ್‌ರು ಹಲ್ಲೆ ಮಾಡಿರುತ್ತಾರೆ ಎಂದು ನಮೂದಿಸಿರುವುದು ಹಾಗೂ ವೈದ್ಯರು No External Injury ಎಂದು ನಮೂದಿಸಿರುವುದು ಮತ್ತು ದೂರುದಾರರ ತಂಗಿ ಶ್ರೀಮತಿ ಪವಿತ್ರ ರವರು ದಿನಾಂಕ: 05-10-2020 ರಿಂದ 07-10-2020 ರವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುವುದು ಕಂಡು ಬಂದಿರುತ್ತದೆ. ಶ್ರೀಮತಿ ಪವಿತ್ರ ರವರ ಎಂ.ಎಲ್.ಸಿ ಮೆಮೋಗೆ ಏನು ಕ್ರಮ ಕೈಗೊಂಡಿರುತ್ತೀರಿ ಎಂದು ಕ್ಯಾತಸಂದ್ರ ಪೊಲೀಸ್ ಠಾಣೆಯ ಠಾಣಾಧಿಕಾರಿಗಳಿಗೆ ವರದಿ ಕೇಳಿದ್ದು, ಸದರಿಯವರು ಎಂ.ಎಲ್.ಸಿ ಮೆಮೋವನ್ನು ದಿನಾಂಕ: 05-10-2020ರಂದು ಸಂಜೆ 6-10 ಗಂಟೆಗೆ ಸ್ವೀಕರಿಸಿದ್ದು, ದಿನಾಂಕ: 08-10-2020 ರಂದು ಆಸ್ಪತ್ರೆಗೆ ಭೇಟಿ ನೀಡಿದಾಗ ಶ್ರೀಮತಿ ಪವಿತ್ರ ರವರು ಆಸ್ಪತ್ರೆಯಿಂದ ಬಿಡುಗಡೆಯಾಗಿ ಹೋಗಿರುತ್ತಾರೆ. ನಂತರ ಶ್ರೀಮತಿ ಪವಿತ್ರ ರವರು ಯಾವುದೇ ದೂರನ್ನು ನೀಡಿರುವುದಿಲ್ಲ. ಶ್ರೀಮತಿ ಪವಿತ್ರ ರವರು ಕ್ಯಾತಸಂದ್ರ ಪೊಲೀಸ್ ಠಾಣಾ ಮೊ.ಸಂ:188/2020 ಕಲಂ 341, 323, 427, 448, 504, 506 ಐಪಿಸಿ ಪ್ರಕರಣದಲ್ಲಿ ಆರೋಪಿಯಾಗಿದ್ದು, ಪ್ರಕರಣದ ದಿಕ್ಕು ತಪ್ಪಿಸುವ ಉದ್ದೇಶದಿಂದ ಆಸ್ಪತ್ರೆಗೆ ದಾಖಲಾಗಿರುತ್ತಾರೆಂದು ವರದಿ ನೀಡಿರುತ್ತಾರೆ.

ದಿನಾಂಕ: 05-10-2020 ರಂದು ಕ್ಯಾತಸಂದ್ರ ಪೊಲೀಸ್ ಠಾಣೆಯ ಸಿಸಿ ಕ್ಯಾಮರಾ ಫುಟೇಜ್‌ನ್ನು ಪರಿಶೀಲಿಸಲಾಗಿ, ಪಿ.ಎಸ್.ಐ ಶ್ರೀಮತಿ ಮಂಜುಳ ರವರು ಜೀಪ್‌ನಲ್ಲಿ ಶ್ರೀಮತಿ ನೇತ್ರಾವತಿ, ಅವರ ತಂಗಿ ಶ್ರೀಮತಿ ಪವಿತ್ರ ಹಾಗೂ ಅವರ ತಾಯಿ ಶ್ರೀಮತಿ ನಾಗರತ್ನರವರನ್ನು ಕ್ಯಾತಸಂದ್ರ ಪೊಲೀಸ್ ಠಾಣಾ ಆವರಣಕ್ಕೆ ಕರೆದುಕೊಂಡು ಬಂದು ಜೀಪ್‌ನಿಂದ ಕೆಳಗೆ ಇಳಿದ ನಂತರ ಪರಸ್ಪರ ತಳ್ಳಾಡಿರುವ ದೃಶ್ಯಗಳು ಹಾಗೂ ಠಾಣಾ ಸ್ವಾಗತಕಾರರ ಟೇಬಲ್ ಬಳಿ ಪಿ.ಎಸ್.ಐ ಶ್ರೀಮತಿ ಮಂಜುಳ ರವರು ತನ್ನ ಕೈನಿಂದ ದೂರುದಾರರಾದ ಶ್ರೀಮತಿ ನೇತ್ರಾವತಿ ರವರ ಕೆನ್ನೆಗೆ ಹೊಡೆದಿರುವ ದೃಶ್ಯ ಕಂಡು ಬಂದಿರುತ್ತವೆ. ಆದರೆ ಶ್ರೀಮತಿ ಪವಿತ್ರ ರವರಿಗೆ ಹಲ್ಲೆ ಮಾಡಿರುವ ಯಾವುದೇ ದೃಶ್ಯಗಳು ಕಂಡುಬಂದಿರುವುದಿಲ್ಲ".

ಸದರಿ ವರದಿಯ ಪ್ರತಿಯನ್ನು ದೂರುದಾರರ ಅಭಿಪ್ರಾಯಕ್ಕಾಗಿ ಕಳುಹಿಸಲಾಗಿದ್ದು, ದೂರುದಾರರು ಯಾವುದೇ ಅಭಿಪ್ರಾಯ ಸಲ್ಲಿಸಿರುವುದಿಲ್ಲ.

ದೂರು ಮತ್ತು ವರದಿಯನ್ನು ಪರಿಶೀಲಿಸಲಾಗಿ, ದೂರರ್ಜಿಗೆ ಸಂಬಂಧಿಸಿದಂತೆ ದಿನಾಂಕ: 05.10.2020 ರ ಕ್ಯಾತಸಂದ್ರ ಪೊಲೀಸ್ ಠಾಣೆಯ ಸಿಸಿ ಕ್ಯಾಮರಾ ಫುಟೇಜ್‌ನ್ನು ಪರಿಶೀಲಿಸಲಾಗಿ, ಪಿ.ಎಸ್.ಐ ಶ್ರೀಮತಿ ಮಂಜುಳ ರವರು ಜೀಪ್‌ನಲ್ಲಿ ಶ್ರೀಮತಿ ನೇತ್ರಾವತಿ, ಅವರ ತಂಗಿ ಶ್ರೀಮತಿ ಪವಿತ್ರ

ಹಾಗೂ ಅವರ ತಾಯಿ ಶ್ರೀಮತಿ ನಾಗರತ್ನರವರನ್ನು ಕ್ಯಾತಸಂದ್ರ ಪೊಲೀಸ್ ಠಾಣಾ ಆವರಣಕ್ಕೆ ಕರೆದುಕೊಂಡು ಹೋಗಿ ಜೀಪ್‌ನಿಂದ ಕೆಳಗೆ ಇಳಿದ ನಂತರ ಪರಸ್ಪರ ತಳ್ಳಾಡಿರುವ ದೃಶ್ಯಗಳು ಹಾಗೂ ಠಾಣಾ ಸ್ವಾಗತಕಾರರ ಟೇಬಲ್ ಬಳಿ ಪಿ.ಎಸ್.ಐ ಶ್ರೀಮತಿ ಮಂಜುಳ ರವರು ತನ್ನ ಕೈನಿಂದ ದೂರುದಾರರಾದ ಶ್ರೀಮತಿ ನೇತ್ರಾವತಿರವರ ಕೆನ್ನೆಗೆ ಹೊಡೆದಿರುವ ದೃಶ್ಯ ಕಂಡು ಬಂದಿರುತ್ತದೆಂದು ವರದಿ ಮಾಡಿರುವುದರಿಂದ ಶ್ರೀಮತಿ ಎಂ.ಎನ್ ಮಂಜುಳ, ಪೊಲೀಸ್ ಸಬ್‌ಇನ್ಸ್‌ಪೆಕ್ಟರ್, ಅಪರಾಧ ವಿಭಾಗ, ಕ್ಯಾತಸಂದ್ರ ಪೊಲೀಸ್ ಠಾಣೆ, ತುಮಕೂರು ಹಾಲಿ ಪಿಎಸ್‌ಐ, ಐಎಸ್‌ಡಿ ಡಿವಿಷನ್, ತುಮಕೂರು ರವರಿಗೆ ಮಾನವ ಹಕ್ಕುಗಳ ಸಂರಕ್ಷಣಾ ಕಾಯ್ದೆ 1993 ಕಲಂ 16 ರಡಿ ನೋಟಿಸ್ ಜಾರಿ ಮಾಡಿ, ದಿನಾಂಕ:24.05.2021 ರಂದು ಬೆಳಗ್ಗೆ 12.00 ಗಂಟೆಗೆ ಆಯೋಗದ ಮುಂದೆ ಖುದ್ದಾಗಿ ಹಾಜರಾಗುವಂತೆ ಹಾಗೂ ಸದರಿ ದಿನಾಂಕದಂದು ದೂರುದಾರರಾದ ಶ್ರೀಮತಿ ನೇತ್ರಾವತಿ ಮತ್ತು ಅವರ ತಂಗಿ ಶ್ರೀಮತಿ ಪವಿತ್ರಾ ರವರಿಗೂ ಕೂಡ ಆಯೋಗದ ಮುಂದೆ ಹಾಜರಾಗುವಂತೆ ಸೂಚಿಸಿದ್ದು, ಅದರಂತೆ ದಿನಾಂಕ 31.07.2021 ರಂದು ಶ್ರೀಮತಿ ಮಂಜುಳ, ಪಿ.ಎಸ್.ಐ. ಅಂತರಿಕ ಭದ್ರತಾ ಇಲಾಖೆ, ತುಮಕೂರು, ದೂರುದಾರರಾದ ಶ್ರೀಮತಿ ನೇತ್ರಾವತಿ, ಅವರ ತಾಯಿ ನಾಗರತ್ನ ಹಾಗೂ ಸಹೋದರಿ ಶ್ರೀಮತಿ ಪವಿತ್ರ ರವರುಗಳು ಆಯೋಗದ ಮುಂದೆ ಹಾಜರಾಗಿದ್ದು, ದೂರುದಾರರ ತಾಯಿ ಶ್ರೀಮತಿ ನಾಗರತ್ನ ಹಾಗೂ ಪಿ.ಎಸ್.ಐ. ಶ್ರೀಮತಿ ಮಂಜುಳ ರವರು ಅವರ ಹೇಳಿಕೆಗಳನ್ನು ನೀಡಿರುತ್ತಾರೆ.

ದಿನಾಂಕ 31.07.2021 ರಂದು ದೂರುದಾರರ ತಾಯಿ ಶ್ರೀಮತಿ ನಾಗರತ್ನ ರವರು ಆಯೋಗದ ಮುಂದೆ ನೀಡಿರುವ ಹೇಳಿಕೆಯು ಕೆಳಕಂಡಂತಿದೆ:

> "ನನ್ನ ಮಗಳು ನೇತ್ರಾವತಿ 11ನೇ ಕ್ರಾಸ್, ಶ್ರೀನಗರ, ತುಮಕೂರು ನಲ್ಲಿರುವ ಶ್ರೀಮತಿ ಸುಜಾತ ರವರ ಮನೆಯನ್ನು 50,000/- ರೂಗಳಿಗೆ ಭೋಗ್ಯಕ್ಕೆ ತೆಗೆದುಕೊಂಡು ತನ್ನ ಮಕ್ಕಳೊಂದಿಗೆ ವಾಸವಾಗಿದ್ದಳು. ಮನೆಯ ಮಾಲೀಕರಾದ ಶ್ರೀಮತಿ ಸುಜಾತ ರವರನ್ನು ಮನೆ ಅಗ್ರಿಮೆಂಟ್ ಮಾಡಿಕೊಡುವಂತೆ ಕೇಳಿದ್ದಕ್ಕೆ ಕೋವಿಡ್-19 ಪ್ರಯುಕ್ತ ಅಗ್ರಿಮೆಂಟ್ ಮಾಡಲು ಸಾಧ್ಯವಾಗುತ್ತಿಲ್ಲ ಸ್ವಲ್ಪ ಸಮಯದ ನಂತರ ಅಗ್ರಿಮೆಂಟ್ ಮಾಡಿಸಿಕೊಡುತ್ತೇನೆ ಎಂದು ಹೇಳಿರುತ್ತಾರೆ. ಆದರೆ ಸ್ವಲ್ಪ ಸಮಯದ ನಂತರ ಮನೆಯ ಮುಂದೆ ಬಾಡಿಗೆಗೆ ಮನೆ ಖಾಲಿ ಇದೆ ಎಂಬ ಬೋರ್ಡ್ ಹಾಕಿದ್ದು, ನನ್ನ ಮಗಳು ನಾವು ಮನೆಯನ್ನು ಭೋಗ್ಯಕ್ಕೆ ತೆಗೆದುಕೊಂಡು ವಾಸವಿದ್ದೇವೆ. ಆದರೆ ನೀವು ಬಾಡಿಗೆಗೆ ಮನೆ ಖಾಲಿ ಇದೆ ಎಂದು ಏಕೆ ಬೋರ್ಡ್ ಹಾಕಿದ್ದೀರಿ, ಹಾಗಿದ್ದಲ್ಲಿ ನನ್ನ ಭೋಗ್ಯದ ಹಣ 50,000/- ರೂಗಳನ್ನು ವಾಪಸ್ ಕೊಡಿ, ನಾನು ಮನೆ ಖಾಲಿ ಮಾಡುತ್ತೇನೆ ಎಂದು ಹೇಳಿದ್ದಕ್ಕೆ, ಮನೆ ಮಾಲೀಕರಾದ ಸುಜಾತ ರವರು ನೀನು 10,000/- ರೂ ಮಾತ್ರ ಕೊಟ್ಟಿರುವುದು ಎಂದು ನನ್ನ ಮಗಳ ಮೇಲೆ ಜೋರು ಮಾಡಿದ್ದು, ನಂತರ ಈ ವಿಷಯದ ಸಂಬಂಧ ಪರಸ್ಪರ ಇಬ್ಬರ ನಡುವೆ ಜಗಳವಾಗಿದ್ದು, ಕ್ಯಾತಸಂದ್ರ ಪೊಲೀಸ್ ಠಾಣೆಯಲ್ಲಿ ಪರಸ್ಪರ ದೂರು ದಾಖಲಾಗಿರುತ್ತದೆ. ಈ ಬಗ್ಗೆ ಎ.ಎಸ್.ಐ ಶ್ರೀ ಸಿದ್ದಪ್ಪ ರವರು ಇದು ಸಿವಿಲ್ ಸ್ವರೂಪದ್ದಾಗಿದ್ದು, ಸಿವಿಲ್ ಕೋರ್ಟ್‌ನಲ್ಲಿ ಬಗೆಹರಿಸಿಕೊಳ್ಳುವಂತೆ ಹಿಂಬರಹವನ್ನು ನೀಡಿ ಕಳುಹಿಸಿಕೊಟ್ಟಿರುತ್ತಾರೆ.

ಎರಡು ದಿನಗಳ ನಂತರ ಪಿ.ಎಸ್.ಐ ಶ್ರೀಮತಿ ಮಂಜುಳ ರವರು ನನ್ನ ಮಗಳ ಮನೆಯ ಹತ್ತಿರ ಹೋಗಿ ಮನೆಯ ಮಾಲೀಕರಾದ ಸುಜಾತ ರವರತ್ತಿರ ಮಾತುಕತೆ ಮುಗಿಸಿ, ನನ್ನ ಮಗಳು ನೇತ್ರಾವತಿಯನ್ನು ಕರೆದು, ಅವಳ ಮೊಬೈಲ್ ಕಿತ್ತುಕೊಂಡು ಅವಾಚ್ಯ ಶಬ್ದಗಳಿಂದ ಬೈದು, ಅವಮಾನ ಮಾಡಿ, ನನ್ನ ಚಿಕ್ಕ ಮಗಳು ಹೂವ್ಯಾಪಾರ ಮಾಡುತ್ತಿದ್ದ ಸ್ಥಳಕ್ಕೆ ಹೋಗಿ ಅವಳಿಗೂ 'ಏ ಚಿನಾಲಿ' ಎಂದು ಅವಾಚ್ಯ ಶಬ್ದಗಳಿಂದ ಬೈದು ನಿನ್ನ ಅಕ್ಕ ನೇತ್ರಾವತಿಗೆ ಮನೆ ಖಾಲಿ ಮಾಡುವಂತೆ ಹೇಳು, ಇಲ್ಲದಿದ್ದರೆ ನಿಮ್ಮಗಳ ಮೇಲೆ 4, 5 ಗಾಂಜಾ ಮತ್ತು ಡ್ರಗ್ಸ್ ಕೇಸು ಹಾಕುತ್ತೇನೆಂದು ಮತ್ತು ನಿಮ್ಮ ಅಂಗಡಿಯನ್ನು ಮುಚ್ಚಿಸುತ್ತೇನೆಂದು ಬೆದರಿಕೆ ಹಾಕಿ ಹೋಗಿರುತ್ತಾರೆ. ಈ ವಿಚಾರವಾಗಿ ನಾನು ಮತ್ತು ನನ್ನ ಇಬ್ಬರು ಹೆಣ್ಣು ಮಕ್ಕಳು ಭಯಭೀತರಾಗಿ ತುಮಕೂರಿನ ಎಸ್.ಪಿ ಸಾಹೇಬರ ಕಛೇರಿಗೆ ಭೇಟಿ ನೀಡಿ, ಕ್ಯಾತಸಂದ್ರದ ಪಿ.ಎಸ್.ಐ ಶ್ರೀಮತಿ ಮಂಜುಳ ರವರು ನಮಗೆ ಕಿರುಕುಳ ಕೊಡುತ್ತಿರುವ ಬಗ್ಗೆ ದೂರು ನೀಡಿ ನಮಗೆ ರಕ್ಷಣೆ ಕೊಡಬೇಕೆಂದು ಮನವಿ ಮಾಡಿಕೊಂಡೆವು. ಆಗ ಅವರು ಸಿ.ಪಿ.ಐ ಶ್ರೀ ಚನ್ನೇಗೌಡ ಸಾಹೇಬರವರನ್ನು ನೋಡಲು ಹೇಳಿದರು.

ನಂತರ ನಾವು ಸಿ.ಪಿ.ಐ ಶ್ರೀ ಚನ್ನೇಗೌಡ ಸಾಹೇಬರನ್ನು ನೋಡಲು ದಿನಾಂಕ.03.10.2020ರಂದು ಹೋದಾಗ ಸಾಹೇಬರು ಇರಲಿಲ್ಲ. ಅಲ್ಲಿ ಸಾಹೇಬರು ಯಾವಾಗ ಸಿಕ್ಕುತ್ತಾರೆ ಎಂದು ಅಲ್ಲಿದ್ದ ಪೊಲೀಸರನ್ನು ಕೇಳಿದಾಗ ಸೋಮವಾರ ಬರುತ್ತಾರೆ ಎಂದು ಹೇಳಿದರು. ಆಗ ಮನೆಗೆ ವಾಪಸ್ ಬಂದೆವು.

ದಿನಾಂಕ.05.10.2020 ನನ್ನ ಗಂಡನಿಗೆ ತುಂಬಾ ಉಷಾರಿಲ್ಲದ ಕಾರಣ ನಾನು ಅವರಿಗೆ ಗಂಜಿ ಕುಡಿಸಿ ಉಪಚಾರ ಮಾಡುತ್ತಿದ್ದ ಸಂದರ್ಭದಲ್ಲಿ ಕ್ರೈಂ ಪೊಲೀಸ್ ಶ್ರೀ ರಮೇಶ್ ರವರು ನಮಗೆ ಫೋನ್ ಮಾಡಿ ಠಾಣೆಗೆ ಬರುವಂತೆ ಕಿಡಿ ಕಾರಿದರು. ಆಗ ನಾವುಗಳು ಭಯಪಟ್ಟು ಬೆಳಿಗ್ಗೆ 9.00 ಗಂಟೆಗೆ ಹೋದೆವು. ಅಲ್ಲಿ ನಮಸ್ತೆ ಎಂದು ಕೈಮುಗಿದು ಒಳಗೆ ಹೋಗುತ್ತಿದ್ದಂತೆಯೇ ಸರ್ಕಲ್ ಇನ್ಸ್‌ಪೆಕ್ಟರ್ ರವರು ಅವಾಚ್ಯ ಶಬ್ದಗಳಿಂದ ಬೈದರು. ಆಗ ನಾವು ದೂರು ಅರ್ಜಿಯನ್ನು ಅವರಿಗೆ ಕೊಟ್ಟೆವು. ಅವರು ಅರ್ಜಿಯನ್ನು ಪೂರ್ತಿ ಓದದೆ ನನಗೂ ಮತ್ತು ನನ್ನ ಹೆಣ್ಣು ಮಕ್ಕಳಿಗೂ ಬೈದು, ಕ್ರೈಂ ರಮೇಶ್ ರವರನ್ನು ಕರೆದು, ನೇತ್ರಾವತಿ ಇವಳು ಮನೆ ಅಡ್ವಾನ್ಸ್ 50,000/- ರೂಗಳನ್ನು ಕೊಟ್ಟಿದ್ದಾಳೆ ಎಂದು ಹೇಳುತ್ತಿದ್ದಾರೆ, ನೀನು ಇವರ ಮನೆ ಹತ್ತಿರ ಹೋಗಿ ಕ್ರೈಂ ಬುದ್ದಿ ತೋರಿಸಿ, 10,000/ ಅಂತ ಹೇಳುವಂತೆ ಹೇಳಿಸಿ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡ ಬಾ, ಅದರ ಮೇಲೆ ನಾನು ಒಂದು ಕೇಸ್ ದಾಖಲು ಮಾಡುತ್ತೇನೆ ಎಂದು ಸರ್ಕಲ್ ಇನ್ಸ್‌ಪೆಕ್ಟರ್ ರವರು ಹೇಳಿದರು. ಅದೇ ರೀತಿ ಕ್ರೈಂ ರಮೇಶ್ ರವರು ಮನೆಗೆ ಬಂದು ತುಂಬಾ ಸುಸ್ತಾಗಿದ್ದ ನನ್ನ ಗಂಡನಿಗೆ ಎಷ್ಟು ಅಡ್ವಾನ್ಸ್ ಕೊಟ್ಟಿದ್ದಾರೆ ಎಂದು ಕೇಳಿದ್ದು, ಆಗ ಅವರು 50,000/- ಎಂದು ಹೇಳಿದಾಗ, ಕ್ರೈಂ ರಮೇಶ್ ರವರು ಆಚೆ ಪೊಲೀಸ್ ಜೀಪ್ ತಂದಿದ್ದೇನೆ. ನೀನು 10,000/- ಎಂದು ಹೇಳಿದರೆ ಬಿಡುತ್ತೇನೆ. ಇಲ್ಲದಿದ್ದರೆ ಜೈಲಿಗೆ ಹಾಕುತ್ತೇನೆಂದು ಬೆದರಿಕೆ ಹಾಕಿದಾಗ, ಇದಕ್ಕೆ ಭಯಪಟ್ಟು ತೊದಲು ನುಡಿಯಿಂದ 10,000/- ಎಂದು ಹೇಳಿರುತ್ತಾನೆ ಎಂದು ಸರ್ಕಲ್ ಇನ್ಸ್‌ಪೆಕ್ಟರ್ ರವರಿಗೆ ವಾಪಸ್ ಬಂದು ಹೇಳಿದರು. ಆಗ ಸರ್ಕಲ್ ಇನ್ಸ್‌ಪೆಕ್ಟರ್ ರವರು ಹೊರಗಡೆ ಇದ್ದ ಮಂಜುಳಾ ರವರನ್ನು ಕರೆದು ನೀನು ಇವರು 3 ಜನರನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಬೆಂಡೆತ್ತಿ ಗಾಂಜಾ ಕೇಸ್

ಹಾಕು ಎಂದು ಹೇಳಿದರು. ಆಗ ನಾವು ಹೆದರಿ ಎಸ್.ಪಿ ಸಾಹೇಬರವರ ಬಳಿ ಹೋಗುತ್ತೇವೆ ಎಂದು ಹೇಳಿದರೂ ಕೂಡ ನಮ್ಮನ್ನು ಬಿಡದೆ, ಜೀಪಿನಲ್ಲಿ ಎಳೆದುಕೊಂಡು ಹೋದರು. ನಾವು ಯಾವ ತಪ್ಪನ್ನು ಮಾಡಿಲ್ಲ, ನಾವು ಬಡವರು ಸ್ವಾಮಿ ಎಂದು ಎಷ್ಟು ಹೇಳಿದರೂ ಕೇಳದೆ, ಮಂಜುಳ ರವರಿಗೆ ಎಳೆದುಕೊಂಡು ಹೋಗು ಎಂದು ತಾಕೀತು ಮಾಡಿದರು. ಅದೇ ರೀತಿ ಮಂಜುಳಾ ರವರು ಜೀಪಿನಲ್ಲಿ ನಮ್ಮನ್ನು ಕ್ಯಾತಸಂದ್ರ ಪೊಲೀಸ್ ಠಾಣೆಯ ಮುಂಭಾಗಕ್ಕೆ ಕರೆದುಕೊಂಡು ಹೋಗಿದ್ದು, ಜೀಪ್ ಇಳಿಯುತ್ತಿದ್ದಂತೆಯೇ ನನ್ನನ್ನು ಎಳೆದು ಬಿಟ್ಟರು. ನನ್ನ ಮಗಳು ನೇತ್ರಾವತಿಯನ್ನು ಜುಟ್ಟು ಹಿಡಿದು ಎಳೆದಿದ್ದು ಕಾಪೌಂಡ್ ಆವರಣದಲ್ಲಿ ಎಳೆದಾಡಿ ಕಪ್ಪಾಳಕ್ಕೆ 10, 15 ಸಾರಿ ಹೊಡೆದು, ಬಾಯಲ್ಲಿ ರಕ್ತ ಬರುವ ಹಾಗೆ ಹೊಡೆದರು. ಆಗ ನನ್ನ ಇನ್ನೊಬ್ಬ ಮಗಳು ಪವಿತ್ರ ನನ್ನ ಅಕ್ಕ ಯಾವ ತಪ್ಪು ಮಾಡಿಲ್ಲ, ಏಕೆ ಹೀಗೆ ಹೊಡೆಯುತ್ತೀರಾ ಎಂದು ಕೇಳಲು ಹೋದಾಗ, ರೆಕಾರ್ಡ್ ಮಾಡುತ್ತಿದ್ದೇನೆಂದು ಅವಳನ್ನು ತಳ್ಳಿದರು. ಆಗ ಅವಳು ಕೆಳಗೆ ಬಿದ್ದಳು, ಆಗ ಮಂಜುಳಾ ರವರು ಬೂಟ್ ಕಾಲಿನಿಂದ ಒದ್ದರು. ಆಗ ತುಂಬಾ ಸುಸ್ತಾಗಿದ್ದರಿಂದ ಕೆಳಗೆ ಬಿದ್ದಿದ್ದ ನನ್ನ ಮಗಳಿಗೆ ನೀರು ಕುಡಿಸಿದೆವು ಹಾಗೂ ಅಲ್ಲೇ ಠಾಣೆಯ ಪಕ್ಕದಲ್ಲಿದ್ದ ಮನೆಯವರು ಸಹ ನೀರು ಕುಡಿಸಿ, ಕಾಫಿ ಸಹ ಕೊಡಿಸಿದರು. ಆಗ ನಾನು ಅಲ್ಲಿಂದ ಎಸ್.ಪಿ ಆಫೀಸ್ ಗೆ ಓಡಿ ಹೋದೆ, ಅಲ್ಲಿ ಸಾಹೇಬರು ಬಾಗಿಲಲ್ಲಿ ನಿಂತಿದ್ದರು, ಆಗ ಅವರ ಕಾಲು ಹಿಡಿದು, ನನ್ನ ಮಗಳು ಒಬ್ಬ ಗರ್ಭಿಣಿ, ನನ್ನ ಮಕ್ಕಳಿಗೆ ಕ್ಯಾತಸಂದ್ರ ಪೊಲೀಸರು ಹೊಡೆಯುತ್ತಿದ್ದಾರೆ ಎಂದು ಹೇಳಿದೆ. ಆದರೆ ಅವರು ಸುಮ್ಮನೆ ಹೊರಟು ಹೋದರು. ವಿಧಿ ಇಲ್ಲದೆ ಅಲ್ಲೆ ಅಳುತ್ತಾ ಕುಳಿತ್ತಿದ್ದೆ. ಸ್ವಲ್ಪ ಹೊತ್ತಲ್ಲೆ ನನ್ನ ಇಬ್ಬರು ಹೆಣ್ಣು ಮಕ್ಕಳನ್ನು ಅಲ್ಲಿಗೆ ಕರೆದುಕೊಂಡು ಬಂದರು. ಒಳಗೆ ಇನ್ಸ್‌ಪೆಕ್ಟರ್ ರವರನ್ನು ಕೇಳಲು ಹೋದಾಗ, ಮಂಜುಳಾ ರವರು 8, 10 ಮಹಿಳಾ ಪೊಲೀಸರನ್ನು ನೋಡಲು ಹೊರಟು ಹೋದರು. ಆದರೆ ಅಲ್ಲೆ ಇದ್ದ ಇಂದಿರಾ ಎನ್ನುವವರು ನನ್ನ ಮಗಳು ಅಳುತ್ತಿದುದ್ದನ್ನು ನೋಡಿ, ಗರ್ಭಿಣಿ ಇವಳನ್ನು ಮೊದಲು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿದರು. ಆಗ ನಾವು ತುಮಕೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಡ್ಮಿಟ್ ಮಾಡಿದೆವು. ಅಲ್ಲಿ ಡಾ॥ ಕುಲಕರ್ಣಿ ಎನ್ನುವವರು ಏಕೆ ಇಷ್ಟು ಸುಸ್ತಾಗಿದ್ದಾಳೆ ಎಂದು ಕೇಳಿದರು. ಪೊಲೀಸ್ ಮಂಜುಳ ರವರು ಹೊಡೆದರು ಎಂದು ಹೇಳಿದೆವು. ಆದರೆ ಅವರು ಮೊದಲು ಬರೆದಿದ್ದನ್ನು ಹೊಡೆದು ಬೇರೆ ಬರೆದರು. ನನ್ನ ಮಗಳನ್ನು ನೋಡಿ ಮೊದಲು ಸ್ಕ್ಯಾನಿಂಗ್ ಮಾಡಿಸಿ ಅಂದರು. ಆಗ ನಾವು ಸ್ಕ್ಯಾನಿಂಗ್ ಮಾಡಿಸಿದೆವು. ನಂತರ ದಿನಾಂಕ.07.10.2020ರಂದು ನಾವು ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಿಸಿಕೊಂಡು ಬಂದೆವು."

ದಿನಾಂಕ 31.07.2021 ರಂದು ಶ್ರೀಮತಿ ಮಂಜುಳ, ಪಿ.ಎಸ್.ಐ. ಅಂತರಿಕ ಭದ್ರತಾ ಇಲಾಖೆ, ತುಮಕೂರು ರವರು ಆಯೋಗದ ಮುಂದೆ ನೀಡಿರುವ ಹೇಳಿಕೆಯು ಕೆಳಕಂಡಂತಿದೆ:

"ನಾನು 28.04.2020 ರಿಂದ ಮಾರ್ಚ್ 31.03.2021 ವರೆಗೆ ಕ್ಯಾತಸಂದ್ರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕಾರ್ಯ ನಿರ್ವಹಿಸುತ್ತಿದ್ದಾಗ, ಸುಜಾತ ಎನ್ನುವವರು ಠಾಣೆಗೆ ಬಂದು ನೇತ್ರಾವತಿ ರವರು ನಮ್ಮ ಮನೆಗೆ ಬಾಡಿಗೆಗೆ ಬಂದು, ಬಾಡಿಗೆ ಹಣವನ್ನು ಸರಿಯಾಗಿ ನೀಡದೆ, ನಮಗೆ ಅವಾಚ್ಯ ಶಬ್ದಗಳಿಂದ ಬೈದು, ಮನೆ

ಗ್ಯಾಸ್ ಲೀಕ್ ಮಾಡಿ, ಬೆಂಕಿ ಹಚ್ಚಿ ಮನೆಯನ್ನು ಸುಟ್ಟು ಹಾಕುತ್ತೇವೆಂದು ಇತ್ಯಾಧಿಯಾಗಿ ಹೇಳಿ, ದೂರು ನೀಡಿದ ಮೇರೆಗೆ ದೂರನ್ನು ಸ್ವೀಕರಿಸಿ ಠಾಣಾ ಎನ್.ಸಿ.ಆರ್ ನಂ.560/2020ರಲ್ಲಿ ದಾಖಲಿಸಿ ವಿಚಾರಣೆ ಕೈಗೊಂಡಿರುತ್ತೇನೆ.

ದಿನಾಂಕ.05.10.2020 ರಂದು ಕ್ಯಾತಸಂದ್ರ ವೃತ್ತದ ಮಾನ್ಯ ಎಸ್.ಪಿ ಸಾಹೇಬರು ಹಾಗೂ ಅಡಿಷನಲ್ ಎಸ್.ಪಿ ಸಾಹೇಬರ ರವರ ಆದೇಶದ ಮೇರೆಗೆ ಕಲ್ಪತರು ಪಡೆ ಸಭೆಗೆ ಹೋಗಿದ್ದು, ಸಿ.ಪಿ.ಐ ರವರು ದೂರವಾಣಿ ಮುಖಾಂತರ ಅವರ ಕಛೇರಿಗೆ ಬರುವಂತೆ ತಿಳಿಸಿದ್ದು, ನಾನು ಅವರ ಆದೇಶದ ಮೇರೆಗೆ ಅಲ್ಲಿಗೆ ಹೋಗಿರುತ್ತೇನೆ. ದೂರು ಅರ್ಜಿಯ ವಿಚಾರವಾಗಿ ಶ್ರೀಮತಿ ನೇತ್ರಾವತಿ, ಅವರ ತಾಯಿ ಶ್ರೀಮತಿ ನಾಗರತ್ನಮ್ಮ ಮತ್ತು ಪವಿತ್ರ ರವರು ಹಾಗೂ ಎದುರು ಅರ್ಜಿದಾರರಾದ ಸುಜಾತ ಹಾಗೂ ಅವರ ಮಗಳು ದೀಪಿಕಾ ಸಹ ಕಛೇರಿಯಲ್ಲಿ ಹಾಜರಿದ್ದು, 2 ಅರ್ಜಿಗಳ ಬಗ್ಗೆ ಮುಕ್ತ ವಿಚಾರಣೆ ಮಾಡಿ ದೂರು ಮತ್ತು ಪ್ರತಿದೂರುಗಳನ್ನು ಪಡೆದು ಎಫ್.ಐ.ಆರ್ ದಾಖಲಿಸುವಂತೆ ಸಿ.ಪಿ.ಐ ಸಾಹೇಬರು ತಿಳಿಸಿದರು. ಅವರ ಆದೇಶದ ಮೇರೆಗೆ ಒಂದೇ ಜೀಪ್‌ನಲ್ಲಿ 2 ಅರ್ಜಿದಾರರುಗಳನ್ನು ಕ್ಯಾತಸಂದ್ರ ಪೊಲೀಸ್ ಠಾಣೆಗೆ ಕರೆದುಕೊಂಡು ಹೋದೆ. ಆಗ ನಾಗರತ್ನಮ್ಮ, ನೇತ್ರಾವತಿ ಹಾಗೂ ಪವಿತ್ರ ರವರುಗಳು ಠಾಣೆಯ ಒಳಗೆ ಬಾರದೇ, ಠಾಣಾ ಆವರಣದಲ್ಲೆ ಒಬ್ಬರಿಗೊಬ್ಬರು ತಳ್ಳಾಡುತ್ತಿದ್ದರು. ಹಾಗೂ ನಾನೊಬ್ಬ ಮಹಿಳೆ ಎನ್ನದೆ, ಸಮವಸ್ತ್ರದಲ್ಲಿ ಕರ್ತವ್ಯದಲ್ಲಿದ್ದ ನನಗೆ ಅವಾಚ್ಯ ಶಬ್ದಗಳಿಂದ ಬೈದು, ನಿಂದಿಸಿ, ಠಾಣೆಯ ಒಳಗೆ ಬಾರದೆ ಇದ್ದದ್ದರಿಂದ, ನಾನು ನೇತ್ರಾವತಿ ಯವರಿಗೆ ತಿಳುವಳಿಕೆ ಹೇಳುವ ಸಲುವಾಗಿ ಅವರಿಗೆ ಒಂದು ಏಟು ಹೊಡೆದೆ. ಅದಕ್ಕೆ ನಾನು ಕ್ಷಮೆಯಾಚಿಸುತ್ತೇನೆ.

ಸುಜಾತ ಮತ್ತು ದೀಪಿಕ ರವರುಗಳು ಠಾಣೆಗೆ ಬಂದು ದೂರು ನೀಡಿದರು. ಅವರು ಕೊಟ್ಟ ದೂರಿನ ಮೇರೆಗೆ ಕ್ರೈಂ ನಂ.188/2020 341, 323, 427, 448, 504, 506 ರೆ/ವಿ 34 ರೀತ್ಯ ಪ್ರಕರಣವನ್ನು ಪಿ.ಎಸ್.ಐ ರವರು ದಾಖಲಿಸಿರುತ್ತಾರೆ. ಈ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದಿಸಿರುತ್ತೇನೆ. ನಂತರ ನಡೆದ ವಿಚಾರಗಳು ನನಗೆ ಗೊತ್ತಿಲ್ಲ.

## Cross Examination:

ದಿನಾಂಕ.30.09.2020ರಂದು ಸುಜಾತ ಮತ್ತು ದೀಪಿಕ ರವರು ಠಾಣೆಗೆ ಬಂದು ಮೌಖಿಕವಾಗಿ ತಿಳಿಸಿದಾಗ, ಠಾಣೆಯ ಎ.ಎಸ್.ಐ ಶ್ರೀ ಸಿದ್ದಪ್ಪ ರವರನ್ನು 2 ದೂರುದಾರರುಗಳ ಬಗ್ಗೆ ವಿಚಾರ ತಿಳಿದು, ನೈಜತೆ ಬಗ್ಗೆ ಸ್ಥಳ ಪರಿಶೀಲನೆಗೆ ಹೋಗಿರುತ್ತೇನೆ.

ಆಯೋಗವು ಪಿ.ಎಸ್.ಐ ಶ್ರೀಮತಿ ಮಂಜುಳರವರಿಗೆ, ಕಂಪ್ಲೈಂಟ್ ಇಲ್ಲದೆ ಸ್ಥಳ ಪರಿಶೀಲನೆಗೆ ಹೇಗೆ ಹೋಗಿದ್ದೀರಿ ಎಂದು ಪ್ರಶ್ನಿಸಿದ್ದು,

ಶ್ರೀಮತಿ ಮಂಜುಳರವರು ಈಗಾಗಲೇ 2 ಜಿ.ಎಸ್.ಸಿ ಅರ್ಜಿಗಳನ್ನು ದಾಖಲಿಸಲಾಗಿದ್ದು, ಎ.ಎಸ್.ಐ ಶ್ರೀ ಸಿದ್ದಪ್ಪ ರವರಿಂದ ಮಾಹಿತಿ ಪಡೆದು, ನೈಜ ಸ್ಥಿತಿ ತಿಳಿಯುವ ಸಲುವಾಗಿ ಸ್ಥಳ ಪರಿಶೀಲನೆಗಾಗಿ ಅರ್ಜಿದಾರರಾದ ಸುಜಾತ ರವರ ಮನೆ

ಬಳಿ ಹೋದೆ. ನಂತರ ಸುಜಾತ ಮತ್ತು ಪವಿತ್ರ ರವರಿಗೆ ಠಾಣೆಗೆ ಬರುವಂತೆ ಹೇಳಿ ವಾಪಸ್ ಹೋದೆ.

ಆಯೋಗವು ಶ್ರೀಮತಿ ಮಂಜುಳ ರವರಿಗೆ ದಿನಾಂಕ.05.10.2020 ರಂದು ಸಂಜೆ ಜೀಪ್‌ನಲ್ಲಿ ದೂರುದಾರರ ಹೂವಿನ ಅಂಗಡಿ ಹತ್ತಿರ ಹೋಗಿ ಮುನ್ಸಿಪಲ್ ಕಾರ್ಯಕರ್ತರಿಗೆ, ಈ ಅಂಗಡಿ ಎತ್ತುವಂತೆ ನೀವು ಹೇಳೀದ್ದೀರಿ ಎಂದು ಪ್ರಶ್ನಿಸಿದ್ದು:

ಶ್ರೀಮತಿ ಮಂಜುಳರವರು ನಾನು ಕ್ಯಾತಸಂದ್ರದಲ್ಲಿರುವ ಸಿದ್ದಗಂಗಾ ಮಠ, ರೈಲ್ವೆ ಸ್ಟೇಷನ್ ಹಾಗೂ ಸಂತೆ ಕೂಡ ಹತ್ತಿರದಲ್ಲೇ ಇರುವುದರಿಂದ ಹಾಗೂ ಆ ಏರಿಯಾದಲ್ಲಿ ಕಳ್ಳತನ ಆಗಾಗ್ಗೆ ನಡೆಯುತ್ತಿರುವುದರಿಂದ ನಾನು ಗಸ್ತಿಗೆ ಹೋಗುತ್ತಿರುತ್ತೇನೆ. ಆದರೆ ನಾನು ದೂರುದಾರರ ಅಂಗಡಿ ಎತ್ತುವಂತೆ ಯಾರಿಗೂ ಹೇಳಿರುವುದಿಲ್ಲ.

ಶ್ರೀಮತಿ ಪವಿತ್ರ ರವರಿಗೆ ದಿನಾಂಕ.05.10.2020 ರಂದು ತುಮಕೂರು ಜಿಲ್ಲಾ ಆಸ್ಪತ್ರೆಗೆ ಹೋಗಿ ಕ್ಯಾತಸಂದ್ರ ಪೊಲೀಸರು ಹೊಡೆದಿದ್ದಾರೆಂದು ಚಿಕಿತ್ಸೆ ಪಡೆದ ಬಗ್ಗೆ ಪ್ರಶ್ನಿಸಿದ್ದು,

ಶ್ರೀಮತಿ ಮಂಜುಳ: ನಾನು ಅವರಿಗೆ ಹೊಡೆದಿಲ್ಲ. ಪವಿತ್ರ ಗರ್ಭಿಣಿಯಾಗಿರುವುದು ನನಗೆ ಗೊತ್ತಿಲ್ಲ".

ಮುಂದುವರೆದು, ಕ್ಯಾತಸಂದ್ರ ಸಿ.ಪಿ.ಐ. ಶ್ರೀ ಚನ್ನೆಗೌಡ ರವರು ಆಯೋಗದ ಮುಂದೆ ಹಾಜರಾಗಲು ನೋಟೀಸ್ ಜಾರಿ ಮಾಡಿದ್ದು, ಅದರಂತೆ ದಿನಾಂಕ: 13.09.2021 ರಂದು ಸಿ.ಪಿ.ಐ. ಶ್ರೀ ಚನ್ನೆಗೌಡ, ಪಿ.ಎಸ್.ಐ. ಆದ ಶ್ರೀಮತಿ ಮಂಜುಳ, ದೂರುದಾರರಾದ ಶ್ರೀಮತಿ ನೇತ್ರಾವತಿ ಹಾಗೂ ಅವರ ತಾಯಿ ನಾಗರತ್ನ ರವರು ಆಯೋಗದ ಮುಂದೆ ಹಾಜರಾಗಿದ್ದು, ಸಿ.ಪಿ.ಐ. ಶ್ರೀ ಚನ್ನೆಗೌಡ ರವರು ಅವರ ಹೇಳಿಕೆಯನ್ನು ನೀಡಿದ್ದು, ಆ ಹೇಳಿಕೆಯು ಸುಳ್ಳೆಂದು ಶ್ರೀಮತಿ ನಾಗರತ್ನ ರವರು ಅವರ ಮುಂದುವರೆದ ಹೇಳಿಕೆ ನೀಡಿರುತ್ತಾರೆ.

ದಿನಾಂಕ 13.09.2021 ರಂದು ಕ್ಯಾತಸಂದ್ರದ ಸಿ.ಪಿ.ಐ. ಶ್ರೀ ಚನ್ನೆಗೌಡ ರವರು ಆಯೋಗದ ಮುಂದೆ ನೀಡಿರುವ ಹೇಳಿಕೆ ಕೆಳಕಂಡಂತಿದೆ:

"ನಾನು 13.08.2020 ರಿಂದ ಇಲ್ಲಿಯವರೆಗೆ ಕ್ಯಾತಸಂದ್ರ ಪೊಲೀಸ್ ಠಾಣೆಯಲ್ಲಿ ಸಿ.ಪಿ.ಐ ಆಗಿ ಕಾರ್ಯ ನಿರ್ವಹಿಸಿದ್ದೇನೆ. ನಾನು ದಿನಾಂಕ.05.10.2020 ರಂದು ಶ್ರೀಮತಿ ರವರು ನೇತ್ರಾವತಿ ರವರ ವಿರುದ್ಧ ನೀಡಿದ ದೂರಿನ ಸಂಬಂಧ ಬೆಳಿಗ್ಗೆ 11.00 ಗಂಟೆ ಸುಮಾರಿಗೆ ಕರೆಸಿದ್ದು, ಈ ಸಮಯದಲ್ಲಿ ಈ ಹಿಂದೆ ಹಲವು ಬಾರಿ ಅಂದೆ ದಿನಾಂಕ.25.09.2020 ಮತ್ತು 03.10.2020 ರಂದು ಕ್ಯಾಸಂದ್ರ ಪೊಲೀಸ್ ಠಾಣೆಯಲ್ಲಿ ದಾಖಲಾದ ಎನ್‌ಸಿಆರ್ ಗಳ ವಿಚಾರಣೆಯಲ್ಲಿ ಪಿ.ಎಸ್.ಐ ಶ್ರೀಮತಿ ಮಂಜುಳ ರವರು ಹೋಗಿದ್ದು, ಮತ್ತು ಈ ಒಂದು ದೂರಿನಲ್ಲಿರುವ ದೂರುದಾರರು ಹಾಗೂ ಎದುರುದಾರರು ಮಹಿಳೆರಾಗಿದ್ದು, ಈ ಸಂಬಂಧ ಮಂಜುಳಾ ರವರನ್ನು ಕರೆಯಿಸಿದ್ದು, ದೂರು ಅರ್ಜಿಯಲ್ಲಿ ಸುಜಾತ ರವರು ನೇತ್ರಾವತಿ ರವರು 50,000/- ರೂಗಳನ್ನು ಭೋಗ್ಯಕ್ಕೆ ಕೊಟ್ಟಿರುದಾಗಿ ಸುಳ್ಳು ಹೇಳುತ್ತಿದ್ದು, ಅವರು ನಮಗೆ ಕೊಟ್ಟಿರುವುದು 10,000/- ಅಡ್ವಾನ್ಸ್, ಹಾಗೂ ಪ್ರತಿ ತಿಂಗಳು 2,000/- ರೂಗಳ ಬಾಡಿಗೆ ನೀಡುತ್ತಿದ್ದು, ಆದರೆ ಕಳೆದ 2 ತಿಂಗಳಿನಿಂದ ಬಾಡಿಗೆ ಕೊಡುತ್ತಿರುವುದಿಲ್ಲವೆಂದು ಸುಜಾತ ರವರು

ಹೇಳಿದ್ದು, ಈ ಬಗ್ಗೆ ನೇತ್ರಾವತಿ ರವರನ್ನು ಕೇಳಿದಾಗ, ನಮ್ಮ ತಂದೆಯನ್ನು ಕೇಳಿ, ನಮ್ಮ ತಂದೆ ಮನೆಯಲ್ಲಿ ಉಷಾರಿಲ್ಲದೆ ಸುಸ್ತಾಗಿ ಮಲಗಿರುತ್ತಾರೆಂದು ತಿಳಿಸಿದರು. ಆಗ ನಾನು ನಮ್ಮ ಠಾಣೆಯ ಶ್ರೀ ರಮೇಶ್ ರವರನ್ನು ಅಲ್ಲೆ ಹಾಜರಿದ್ದ ನೇತ್ರಾವತಿಯ ತಾಯಿ ಜೊತೆ ಕಳುಹಿಸಿ ಅವರ ಮನೆಗೆ ಕಳುಹಿಸಿ ಕೊಟ್ಟಿದ್ದು, ಅವರ ತಂದೆ, ಶ್ರೀ ರಮೇಶ್ ರವರ ಫೋನ್ ಮುಖಾಂತರ ಕರೆ ಮಾಡಿದಾಗ ನಾನು ಸುಜಾತ ರವರಿಗೆ 10,000/- ಅಡ್ವಾನ್ಸ್ ಕೊಟ್ಟಿರುತ್ತೇನೆ ಎಂದು ಲೌಡ್ ಸ್ಪೀಕರ್‌ನಲ್ಲಿ ಮಾತನಾಡಿದಾಗ ಅಲ್ಲೆ ಇದ್ದ ನೇತ್ರವತಿ ಮತ್ತು ಅವರ ತಂಗಿ ಕೂಗಾಡಿ, ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದರು, ಆಗ ನಾನು ಮಂಜುಳಾ ರವರಿಗೆ ಆ ಎಲ್ಲರನ್ನು ಠಾಣೆಗೆ ಕರೆದುಕೊಂಡು ಹೋಗಿ ವಿಚಾರ ಮಾಡಿ, ಅವರು ನೀಡುವ ದೂರನ್ನು ಪಡೆದು ಪ್ರಕರಣ ದಾಖಲಿಸಿ, ತನಿಖೆ ಮಾಡಿ, ಸತ್ಯಾಂಶ ಗೊತ್ತಾಗುತ್ತದೆಂದು ಹೇಳಿ ಕಳುಹಿಸಿಕೊಟ್ಟಿರುತ್ತೇನೆ. ನಂತರ ಆಮೇಲೆ ನಾನು ಅದೇ ದಿನ ಸಂಜೆ ರೌಂಡ್ಸ್‌ನಲ್ಲಿದ್ದಾಗ ಒಂದು ಎಂ.ಎಲ್.ಸಿ ಬಗ್ಗೆ ವೈರ್‌ಲೆಸ್‌ನಲ್ಲಿ ಪ್ರಚಾರ ಆಗುತ್ತಿದ್ದಾಗ ಠಾಣಾ ಪಿ.ಎಸ್.ಐ ರವರಾದ ಶ್ರೀ ರಾಮಪ್ರಸಾದ್ ರವರಿಗೆ ಸ್ಟೇಟ್‌ಮೆಂಟ್ ಪಡೆದು ಕಾನೂನು ರೀತ್ಯ ಪ್ರಕರಣ ದಾಖಲಿಸಿ ಎಂದು ಸೂಚಿಸಿದೆ ಆದರೆ ಎಂ.ಎಲ್.ಸಿ ಇವರದೇ ಎಂದು ನನಗೆ ಗೊತ್ತಿರುವುದಿಲ್ಲ."

ದಿನಾಂಕ 13.09.2021 ರಂದು ದೂರುದಾರರ ತಾಯಿ ಶ್ರೀಮತಿ ನಾಗರತ್ನ ರವರು ಆಯೋಗದ ಮುಂದೆ ನೀಡಿರುವ ಮುಂದುವರೆದ ಹೇಳಿಕೆ ಕೆಳಕಂಡಂತಿದೆ:

"ಕ್ಯಾತಸಂದ್ರ ಠಾಣೆಯ ಪೊಲೀಸರಾದ ಶ್ರೀ ರಮೇಶ್ ರವರಿಗೆ ನಮ್ಮ ಮನೆಗೆ ಕಳುಹಿಸುವಾಗ, ಶ್ರೀ ಚನ್ನೇಗೌಡ ರವರಿಗೆ ನನ್ನ ಗಂಡನಿಗೆ ಉಷಾರಿಲ್ಲ, ತುಂಬಾ ಸುಸ್ತಾಗಿದ್ದಾರೆ, ಅದಕ್ಕೆ ನಾನು ಜೊತೆಗೆ ಹೋಗುತ್ತೇನೆಂದು ಕಾಲು ಹಿಡಿದು ಕೇಳಿಕೊಂಡರು, ಈ 3 ಜನರನ್ನು ಆಚೆ ಬಿಡಬೇಡಿ, ಅವನು ಏನು ಹೇಳುತ್ತಾನೋ ಅದನ್ನು ಮೊದಲು ಕೇಳಿಕೊಂಡು ಅವನು 50,000/- ಎಂದು ಹೇಳಿದರೆ, ಅವನಿಂದ 10,000/- ರೂಗಳೆಂದು ಹೇಳಿಸಿ ರೆಕಾರ್ಡ್ ಮಾಡಿಕೊಂಡು ಬಾ ಎಂದು ಹೇಳಿದರು. ಅದರ ಮೇಲೆ ಕೇಸ್ ಮಾಡಿ, ಇವರನ್ನು ಬೆಳೆಯದಂತೆ ಚಿವುಟಿ ಹಾಕುತ್ತೇನೆಂದು ಹೇಳಿದರು. ಆದರೆ ಶ್ರೀ ರಮೇಶ್ ರವರನ್ನು ನಮ್ಮ ಮನೆಗೆ ಕಳುಹಿಸುವಾಗ ಇನ್ಸ್‌ಪೆಕ್ಟರ್ ಚನ್ನೇಗೌಡ ರವರನ್ನು ಕಾಲು ಹಿಡಿದು ಕೊಂಡು ಸ್ವಾಮಿ ನನ್ನ ಗಂಡನಿಗೆ ಉಷಾರಿಲ್ಲ, ಹೆದರುತ್ತಾರೆ, ಜೊತೆಯಲ್ಲಿ ನಾನೇ ಹೋಗುತ್ತೇನೆಂದು ಕಾಲು ಹಿಡಿದು ಕೇಳಿಕೊಂಡರು, ಕಚೇರಿಯಲ್ಲೇ ಕೂಡಿ ಹಾಕಿರುತ್ತಾರೆ, ಕ್ರೈಂ ರಮೇಶ್ ರವರನ್ನು ನನ್ನ ಜೊತೆಯಲ್ಲಿ ಕಳುಹಿಸಲಿಲ್ಲ. ಅವರೇ ನಮ್ಮ ಮನೆ ಅಡ್ರಸ್ ನನ್ನು ಹೇಳಿ ಕಳುಹಿಸಿರುತ್ತಾರೆ. ಮನೆಗೆ ಹೋದಾಗ ನನ್ನ ದೊಡ್ಡ ಮಗ ಇದ್ದ, ಆಗ ಶ್ರೀ ರಮೇಶ್ ರವರು ಏ ಮುದುಕ, ನಾನು ಕ್ರೈಂ ರಮೇಶ್, ಸಾಹೇಬರು ಹೇಳಿದ್ದಾರೆ, ನಿನ್ನ ಮಗಳು ಎಷ್ಟು ಅಡ್ವಾನ್ಸ್ ಕೊಟ್ಟಿದ್ದಾರೆ ಎಂದು ಕೇಳು ಎಂದು, ಆಗ ನನ್ನ ಗಂಡ 50,000/- ಎಂದು ಐದು ಬೆಟ್ಟನ್ನು ತೋರಿಸಿರುತ್ತಾರೆ. ಆಗ ರಮೇಶ್ ರವರು ಜೀಪ್ ತಂದಿದ್ದೇನೆ, 10,000/- ಎಂದು ಹೇಳು ಎಂದು ಫೋನ್ ಅನ್ನು ನನ್ನ ಗಂಡನ ಬಾಯಿಯ ಹತ್ತಿರ ಇಟ್ಟು, ಬೆದರಿಕೆ ಹಾಕಿದಾಗ ನನ್ನ ಗಂಡ ಹೆದರಿ ತೊದಲು ನುಡಿಯಿಂದ 10,000/- ರೂ ಎಂದು ಹೇಳಿರುತ್ತಾರೆ. ಆಗ ಅವರು ಅದನ್ನು ರೆಕಾರ್ಡ್ ಮಾಡಿಕೊಂಡು ಬಂದು ನಮ್ಮ ಮುಂದೆ ಇನ್ಸ್‌ಪೆಕ್ಟರ್ ರವರಿಗೆ 50,000/- ರೂ ಎಂದು ಹೇಳಿದ, ಆಗ ನಾನು 10,000/- ರೂ ಎಂದು ಬೆದರಿಕೆ ಹಾಕಿ ರೆಕಾರ್ಡ್ ಮಾಡಿಕೊಂಡು ಬಂದಿದ್ದೀನಿ

ಎಂದು ಇನ್ಸ್‌ಪೆಕ್ಟರ್ ಶ್ರೀ ಚನ್ನೇಗೌಡರಿಗೆ ನಮ್ಮ ಮುಂದೆಯೇ ಹೇಳಿದರು. ಆಗ ಅವರು ಮಂಜುಳಾ ರವರನ್ನು ಕರೆಯಿಸಿ ಇದರ ಮೇಲೆ ಒಂದು ಕೇಸ್ ಹಾಕು, ಗಾಂಜಾ ಮತ್ತು ಡ್ರಗ್ಸ್ ಮತ್ತು ನನ್ನ ಮೇಲೆ ಹೊಡೆದರು ಎಂದು ಕೇಸುಗಳನ್ನು ಹಾಕು ಎಂದು ಹೇಳಿದರು.

ನಾನು ಶ್ರೀ ಚನ್ನೇಗೌಡ ರವರ ಹೇಳಿಕೆಯನ್ನು ಕೇಳಿ ಕೊಂಡಿರುತ್ತೇನೆ. ನಾನು ದಿನಾಂಕ.05.10.2020ರಂದು ಬೆಳಿಗ್ಗೆ 9.30 ಗಂಟೆಗೆ ಶ್ರೀ ಚನ್ನೇಗೌಡ ರವರ ಮುಂದೆ ಒಳಗೆ ಹೋಗುತ್ತಿದ್ದಂತೆ "ಏ ಮುದುಕಿ ಮುಂಡೆ ನಿನ್ನ ಮಕ್ಕಳಿಗೆ ಫುಟ್‌ಪಾತ್‌ನಲ್ಲಿ ಏನು ಬುದ್ದಿ ಕಲಿಸಿದ್ದೀಯಾ" ಈಗ ನಾನು ನಿನ್ನ ಮಕ್ಕಳಿಗೆ ಬುದ್ದಿ ಕಲಿಸುತ್ತೇನೆಂದು ನನ್ನ ಅರ್ಜಿಯನ್ನು ಪಕ್ಕಕ್ಕೆ ಇಟ್ಟರು. ಹಾಗೂ ಹೂವಿನ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡಿ 50 ಸಾವಿರ ರೂ ಅಡ್ವಾನ್ಸ್ ಕೊಟ್ಟಿದ್ದೀನಿ ಎಂದು ಹೇಳುತ್ತೀಯಾ, ಈಗ ನೋಡು, ಇವರು ಡ್ರಗ್ಸ್, ಗಾಂಜಾ ಮಾರುತ್ತಿದ್ದರು ಹಾಗೂ ಚನ್ನೇಗೌಡರಿಗೆ ಹೊಡೆದರು ಎಂದು ಜೀಪಿನಲ್ಲಿ ಅನಾವ್‌ನ್ಸ್ ಮಾಡಿ, ನಮಗೆ ಅವಮಾನ ಮಾಡಿ, ನನ್ನ ಅಂಗಡಿಯನ್ನು ತೆರವುಗೊಳಿಸಿ ಎಂದು ಹೇಳಿದರು. ಸ್ವಾಮಿ ನನ್ನ 2 ತಳ್ಳುವ ಗಾಯಲ್ಲಿ 200 ತೆಂಗಿನ ಕಾಯಿಗಳು, 8 ಬಾಳೆಹಣ್ಣು ಗೊನೆ, 2 ತೂಕದ ತಕ್ಕಡಿಗಳು, ಹೂವು, ಅರಿಶಿನ, ಕುಂಕುಮ, ಸೀರೆ, ಬಳೆಗಳು ಹಾಗೂ ಪೂಜಾ ಸಾಮಾಗ್ರಿಗಳಿದ್ದ 2 ತಳ್ಳುವ ಗಾಡಿಗಳನ್ನು ದೂರ ತಳ್ಳಿಬಿಟ್ಟಿದ್ದರು. ನಾವು ಅಲ್ಲಿಗೆ ಹೋಗಲಿಲ್ಲ, 5,6 ದಿನಗಳ ಬಿಟ್ಟು ಹೋದ ನಂತರ ಹೋಗಿ ನೋಡಿದಾಗ ಅಲ್ಲಿ ಆ ಎಲ್ಲಾ ಸಾಮಾಗ್ರಿಗಳು ಇರಲಿಲ್ಲ, ಇದಕ್ಕೆಲ್ಲಾ ಕಾರಣ ಇನ್ಸ್‌ಪೆಕ್ಟರ್ ಶ್ರೀ ಚನ್ನೇಗೌಡ ಹಾಗೂ ಮಂಜುಳಾ ರವರು ಕಾರಣರಾಗಿರುತ್ತಾರೆ. ಇನ್ಸ್‌ಪೆಕ್ಟರ್ ಶ್ರೀ ಚನ್ನೇಗೌಡರವರು ಪಿ.ಎಸ್.ಐ ಶ್ರೀಮತಿ ಮಂಜುಳಾ ರವರಿಗೆ ಹೇಳಿಸಿ, ಅಂಗಡಿಯನ್ನು ತೆರವುಗೊಳಿಸಿರುತ್ತಾರೆ. ಆದರೆ ನಮ್ಮ ಸಾಮಾಗ್ರಿಗಳು ನಮಗೆ ಸಿಗಲಿಲ್ಲ. ನಾವುಗಳು ಏನೇ ತಪ್ಪು ಮಾಡದಿದ್ದರೂ ಶ್ರೀ ಚನ್ನೇಗೌಡರವರು ಪಿ.ಎಸ್.ಐ ಶ್ರೀಮತಿ ಮಂಜುಳಾ ಲಂಚದ ಹಣಕ್ಕೋಸ್ಕರ ಯಾವುದೇ ಸ್ಪಷ್ಟ ದಾಖಲೆಗಳು ಇಲ್ಲದಿದ್ದರೂ ನಮ್ಮ ಮೇಲೆ ಇಲ್ಲ ಸಲ್ಲದ ಆರೋಪಗಳನ್ನು ಹೊರಿಸಿ, ನಮ್ಮ ಮಾನ ಮರ್ಯಾದೆ ಕಳೆದರು. ಇದರಿಂದ ನನ್ನ ಗಂಡ ಮನನೊಂದು ದಿನಾಂಕ.11.10.2021 ಮರಣ ಹೊಂದಿರುತ್ತಾರೆ. ನಮಗೆ ನಷ್ಟವಾಗಿರುವ ಸಾಮಾಗ್ರಿಗಳನ್ನು ಕೊಡಿಸಕೊಡಬೇಕು, ನಮಗೆ ಆದ ಅವಮಾನ ಅವರಿಗೂ ಆಗಬೇಕು ಸ್ವಾಮಿ. ನಮ್ಮ ಅಂಗಡಿಯನ್ನು ತೆರವುಗೊಳಿಸಿರುವುದನ್ನು ಚನ್ನೇಗೌಡರೇ ಬಂದು ನಿಂತು ಅವರೇ ಅಂಗಡಿಯನ್ನು ಹಾಕಿಕೊಡುವಂತೆ ಕೋರುತ್ತೇನೆ."

ಮುಂದುವರೆದು, ದೂರುದಾರರ ತಂಗಿ ಶ್ರೀಮತಿ ಪವಿತ್ರ ರವರು ತುಮಕೂರು ಜಿಲ್ಲಾ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿ ಚಿಕಿತ್ಸೆ ಪಡೆದಿದ್ದು, ಶ್ರೀಮತಿ ಪವಿತ್ರ ರವರು ಆ ಸಮಯದಲ್ಲಿ ಗರ್ಭಿಣಿಯಾಗಿದ್ದರು, ಜಿಲ್ಲಾ ಆಸ್ಪತ್ರೆಯವರು ಎಂ.ಎಲ್.ಸಿ. ಮೇಮೋದಲ್ಲಿ ಕ್ಯಾತಸಂದ್ರ ಪೊಲೀಸ್ ಠಾಣೆಯ ಪೊಲೀಸರ ಹಲ್ಲೆ ಎಂಬುದಾಗಿ ನಮೂದಿಸಿದ್ದು, ಸದರಿ ಎಂ.ಎಲ್.ಸಿ. ಮೇಮೋಗೆ ಸಂಬಂಧಿಸಿದಂತೆ ಪೊಲೀಸರು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ವಿಚಾರಣೆ ಮಾಡಿ ವರದಿ ನೀಡುವಂತೆ ಆಯೋಗದ ಡಿ.ವೈ.ಎಸ್.ಪಿ ಶ್ರೀ ಕೇಶವ್ ರವರಿಗೆ ಸೂಚಿಸಿದ್ದು, ಅದರಂತೆ ದಿನಾಂಕ 29.10.2021 ರ ಪತ್ರದನ್ವಯ ವರದಿ ಸಲ್ಲಿಸಿದ್ದು, ಸದರಿ ವರದಿಯು ಕೆಳಕಂಡಂತಿದೆ:

“ತುಮಕೂರು ಜಿಲ್ಲಾ ಆಸ್ಪತ್ರೆಯವರು ಶ್ರೀಮತಿ ಪವಿತ್ರ ರವರ ಎಂ.ಎಲ್.ಸಿ. ಮೆಮೋಗೆ ಸಂಬಂಧಿಸಿದಂತೆ ಜಿಲ್ಲಾ ಆಸ್ಪತ್ರೆಯ ಹೊರಠಾಣೆಯ ಉಸ್ತುವಾರಿ ಅಧಿಕಾರಿಯಾದ ಶ್ರೀ ಕರೀಂ ಸಾಬ್ ಹೆಚ್.ಸಿ. 143, ರವರನ್ನು ವಿಚಾರಣೆ ಮಾಡಲಾಗಿ ದಿನಾಂಕ 05–10–2020 ರಂದು ಸಂಜೆ 6–00 ಗಂಟೆ ಸಮಯದಲ್ಲಿ ತುಮಕೂರು ಜಿಲ್ಲಾ ಆಸ್ಪತ್ರೆಯ ವೈದ್ಯರಿಂದ ಶ್ರೀಮತಿ ಪವಿತ್ರ ಎಂಬುವವರಿಗೆ ಸಂಬಂಧಿಸಿದ ಎಂ.ಎಲ್.ಸಿ. ಮೆಮೋವನ್ನು ಸ್ವೀಕರಿಸಿಕೊಂಡು, ನಮ್ಮ ರಿಜಿಸ್ಟರ್‌ನಲ್ಲಿ ನಮೂದಿಸಿಕೊಂಡು, ನಂತರ ಸಂಜೆ 6–15 ಗಂಟೆಗೆ ಸಂಬಂಧಪಟ್ಟ ಕ್ಯಾತಸಂದ್ರ ಪೊಲೀಸ್ ಠಾಣೆಗೆ ಫೋನ್ ಮಾಡಿ ಎಸ್.ಹೆಚ್.ಓ ಕರ್ತವ್ಯದಲ್ಲಿದ್ದ ಎ.ಎಸ್.ಐ. ಶ್ರೀ ಸಿದ್ದಪ್ಪ ರವರಿಗೆ ಎಂ.ಎಲ್.ಸಿ. ಮೆಮೋ ಇರುವ ಬಗ್ಗೆ ಮಾಹಿತಿ ತಿಳಿಸಿರುತ್ತೇನೆ. ಅದೇ ದಿನ ಸಂಜೆ 7–15 ಗಂಟೆ ಸಮಯದಲ್ಲಿ ಕ್ಯಾತಸಂದ್ರ ಪೊಲೀಸ್ ಠಾಣೆಯ ಪಿ.ಎಸ್.ಐ ಶ್ರೀಮತಿ ಮಂಜುಳ ರವರು ಹಾಜರಾಗಿ ಎಂ.ಎಲ್.ಸಿ. ಮೆಮೋವನ್ನು ಸ್ವೀಕರಿಸಿಕೊಂಡು ಹೋದರು ಎಂದು ಹೇಳಿಕೆಯಲ್ಲಿ ತಿಳಿಸಿರುತ್ತಾರೆ.

ಶ್ರೀ ಸಿದ್ದಪ್ಪ ಆರ್.ಎಸ್. ಎ.ಎಸ್.ಐ., ಕ್ಯಾತಸಂದ್ರ ಪೊಲೀಸ್ ಠಾಣೆ, ರವರನ್ನು ವಿಚಾರಣೆ ಮಾಡಲಾಗಿ ದಿನಾಂಕ 05–10–2020 ರಂದು ಸಂಜೆ 6–15 ಗಂಟೆ ಸಮಯದಲ್ಲಿ ತುಮಕೂರು ಜಿಲ್ಲಾ ಸರ್ಕಾರಿ ಆಸ್ಪತ್ರೆಯ ಹೊರಠಾಣೆಯ ಸಿಬ್ಬಂದಿ ಶ್ರೀ ಕರೀಮ್ ಪಾಷ ಹೆಚ್.ಸಿ 143 ರವರು ದೂರವಾಣಿ ಕರೆಮಾಡಿ ಪವಿತ್ರ, ಕ್ಯಾತಸಂದ್ರ ಎಂಬುವವರು ಹಲ್ಲೆಪ್ರಕರಣದಲ್ಲಿ ಒಳರೋಗಿಯಾಗಿ ದಾಖಲಾಗಿರುತ್ತಾರೆ ಎಂ.ಎಲ್.ಸಿ. ಮೆಮೋ ಇರುವುದಾಗಿ ತಿಳಿಸಿದ್ದು, ಅದರಂತೆ ನಾನು ಠಾಣೆಯಲ್ಲಿದ್ದ ಪಿ.ಎಸ್.ಐ 2 ಶ್ರೀಮತಿ ಮಂಜುಳ ರವರಿಗೆ ತಿಳಿಸಿದೆನು. ಪಿ.ಎಸ್.ಐ ಮಂಜುಳವರು ನಾನು ಆಸ್ಪತ್ರೆಗೆ ಭೇಟಿ ನೀಡುತ್ತೇನೆ ಎಂದು ತಿಳಿಸಿ ಹೋದರು. ನಂತರ ನಾನು ಎಂ.ಎಲ್.ಸಿ. ಮೆಮೋದ ಬಗ್ಗೆ ಪಿ.ಎಸ್.ಐ 1 ಶ್ರೀ ರಾಮ್‌ಪ್ರಸಾದ್ ರವರಿಗೆ ತಿಳಿಸಿರುತ್ತೇನೆ. ಸದರಿ ಎಂ.ಎಲ್.ಸಿ. ಮೆಮೋಗೆ ಸಂಬಂಧಿಸಿದಂತೆ ಪಿ.ಎಸ್.ಐ ರವರುಗಳು ಏನು ಕ್ರಮ ತೆಗೆದುಕೊಂಡಿರುತ್ತಾರೆಂಬುದು ನನಗೆ ಗೊತ್ತಿರುವುದಿಲ್ಲ ಎಂದು ಹೇಳಿಕೆಯಲ್ಲಿ ತಿಳಿಸಿರುತ್ತಾರೆ.

ಶ್ರೀಮತಿ ಮಂಜುಳ ಪಿ.ಎಸ್.ಐ ರವರನ್ನು ವಿಚಾರಣೆ ಮಾಡಲಾಗಿ ದಿನಾಂಕ 05–10–2020 ರಂದು ಸಂಜೆ 4–00 ಗಂಟೆಗೆ ತುಮಕೂರು ಜಿಲ್ಲಾ ಪೊಲೀಸ್ ಕಛೇರಿಯಲ್ಲಿ ಆಯೋಜಿಸಿದ್ದ ಸಭೆಗೆ ಹೋಗಿದ್ದೆನು. ನಾನು ಸಭೆಯಲ್ಲಿದ್ದಾಗ ಆ ದಿನ ಸಂಜೆ ಠಾಣೆಯಿಂದ ಎ.ಎಸ್.ಐ ಶ್ರೀ ಸಿದ್ದಪ್ಪ ರವರು ನನಗೆ ಪೋನ್ ಮಾಡಿ ಶ್ರೀಮತಿ ಪವಿತ್ರ ಎಂಬುವವರು ಆಸ್ಪತ್ರೆಗೆ ದಾಖಲಾಗಿದ್ದು, ಎಂ.ಎಲ್.ಸಿ. ಮೆಮೋ ಇರುವುದಾಗಿ ತಿಳಿಸಿದರು. ಆಗ ನಾನು ಎ.ಎಸ್.ಐ ಸಿದ್ದಪ್ಪರವರಿಗೆ ನಾನು ಮೀಟಿಂಗ್‌ನಲ್ಲಿದ್ದೇನೆ. ನನ್ನ ಮೇಲೆಯೇ ಅವರು ಈಗಾಗಲೇ ಅಪಾದನೆ ಮಾಡಿ ಎಸ್.ಪಿ ಸಾಹೇಬರಿಗೆ ದೂರು ಅರ್ಜಿ ನೀಡಿದ್ದಾರೆ ಹಾಗೂ ಈ ದಿನ ಮದ್ಯಾಹ್ನ ಠಾಣೆಯ ಮುಂದೆ ಸಮವಸ್ತ್ರದಲ್ಲಿದ್ದ ನನ್ನ ಮೇಲೆ ತಳ್ಳಾಟಮಾಡಿ ಕೈಯಲ್ಲಿದ್ದ ದೂರು ಅರ್ಜಿಗಳನ್ನು ಕಿತ್ತುಕೊಳ್ಳಲು ಪ್ರಯತ್ನಿಸಿ ಕರ್ತವ್ಯಕ್ಕೆ ಅಡ್ಡಪಡಿಸಿರುತ್ತಾರೆ ಈಗಿರುವಾಗ ನಾನು ಆಸ್ಪತ್ರೆಗೆ ಹೋದರೆ ಮತ್ತೆ ನನ್ನ ಮೇಲೆ ಅವರು ಏನಾದರೂ ಆಪಾದನೆ ಮಾಡಬಹುದು, ಈಗಾಗಲೇ ಅವರ ಮೇಲೆ ಪ್ರಕರಣ ದಾಖಲಾಗಿದ್ದು, ಪ್ರಕರಣದ ತನಿಖಾಧಿಕಾರಿಗಳೇ ಆಸ್ಪತ್ರೆಗೆ ಭೇಟಿ ನೀಡಿ ಅವರ ಹೇಳಿಕೆ ಪಡೆದುಕೊಳ್ಳಲಿ ಎಂದು ತಿಳಿಸಿರುತ್ತೇನೆ. ಆ ದಿನ ನಾನು ಆಸ್ಪತ್ರೆಗೆ

ಹೋದ ವಿಚಾರ ಹಾಗೂ ಎಂ.ಎಲ್.ಸಿ. ಮೆಮೋ ವಿಚಾರ ತುಂಬಾ ದಿನಗಳಾಗಿರುವುದರಿಂದ ನಿಖರವಾಗಿ ನೆನಪಿರುವುದಿಲ್ಲ ಎಂದು ಹೇಳಿಕೆ ನೀಡಿರುತ್ತಾರೆ.

ಶ್ರೀ ರಾಮ ಪ್ರಸಾದ್, ಪೊಲೀಸ್ ಇನ್ಸ್‌ಪೆಕ್ಟರ್ ರವರನ್ನು ವಿಚಾರಣೆ ಮಾಡಲಾಗಿ ನಾನು ಈ ಹಿಂದೆ ಕ್ಯಾತಸಂದ್ರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯನಿರ್ವಹಿಸುತ್ತಿದ್ದ ಸಮಯದಲ್ಲಿ ದಿನಾಂಕ 05-10-2020 ರಂದು ಮದ್ಯಾಹ್ನ 2-15 ಗಂಟೆಗೆ ಶ್ರೀಮತಿ ಸುಜಾತ ಎಲ್ ಎಂಬುವವರು ಠಾಣೆಗೆ ಹಾಜರಾಗಿ ಬಾಡಿಗೆ ವಿಚಾರವಾಗಿ ಶ್ರೀಮತಿ ನೇತ್ರಾವತಿ, ಅವರ ತಂಗಿ ಶ್ರೀಮತಿ ಪವಿತ್ರ, ತಾಯಿ ನಾಗರತ್ನಮ್ಮ ರವರ ವಿರುದ್ಧ ನೀಡಿದ ದೂರಿನ ಮೇರೆಗೆ ಠಾಣಾ ಮೊ.ಸಂ. 188/2020 ಕಲಂ. 341, 323, 427, 448, 504, 506 ರೆ/ವಿ 34 ಐ.ಪಿ.ಸಿ ರೀತ್ಯ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತೇನೆ. ಅದೇ ದಿನ ಸಂಜೆ ಠಾಣಾಸರಹದ್ದಿನಲ್ಲಿ ಗಸ್ತಿನಲ್ಲಿದ್ದಾಗ ಸಂಜೆ 6-30 ಗಂಟೆ ಸಮಯದಲ್ಲಿ ಠಾಣಾ ಉಸ್ತುವರಿಯಲ್ಲಿದ್ದ ಎ.ಎಸ್.ಐ ಶ್ರೀ ಸಿದ್ದಪ್ಪ ರವರು ನನಗೆ ಕರೆಮಾಡಿ ಶ್ರೀಮತಿ ಪವಿತ್ರ ರವರು ತುಮಕೂರು ಜಿಲ್ಲಾ ಆಸ್ಪತ್ರೆಗೆ ದಾಖಲಾಗಿದ್ದು, ಎಂ.ಎಲ್.ಸಿ. ಮೆಮೋ ಇರುವುದಾಗಿ ಆಸ್ಪತ್ರೆಯ ಸಿಬ್ಬಂದಿ ತಿಳಿಸಿರುತ್ತಾರೆಂದು ಹೇಳಿದರು. ನಾನು ದಿನಾಂಕ 06-10-2020 ರಂದು ಬೆಳಗ್ಗೆ 11-20 ಗಂಟೆಗೆ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳು ಶ್ರೀಮತಿ ಪವಿತ್ರ ರವರನ್ನು ಭೇಟಿ ಮಾಡಿ ಹೇಳಿಕೆ ನೀಡುವಂತೆ ತಿಳಿಸಿದ್ದು, ಆಕೆಯು ಹೇಳಿಕೆ ನೀಡಲು ನಿರಾಕರಿಸಿ ನಾನು ನಮ್ಮ ವಕೀಲರ ಜೊತೆ ಚರ್ಚಿಸಿ ಠಾಣೆಗೆ ಬಂದು ದೂರು ನೀಡುತ್ತೇನೆ ಎಂದು ತಿಳಿಸಿದರು. ನಾನು ಅವರಿಗೆ ನೀವು ಠಾಣೆಗೆ ಹಾಜರಾಗಿ ದೂರು ನೀಡಿದ ನಂತರ ಕ್ರಮ ಜರುಗಿಸುವುದಾಗಿ ತಿಳಿಸಿ ಬಂದಿರುತ್ತೇನೆ. ದಿನಾಂಕ 09-10-2020 ರಂದು ಶ್ರೀಮತಿ ಪವಿತ್ರ ಆಸ್ಪತ್ರೆಯಿಂದ ಬಿಡುಗಡೆಯಾಗಿರುವುದಾಗಿ ತಿಳಿದುಬಂದಿದ್ದು, ಆಕೆಯು ಹೇಳಿಕೆ ನೀಡಲು ಠಾಣೆಗೆ ಹಾಜರಾಗದಿದ್ದ ಕಾರಣ, ಅವರಿಗೆ ನೋಟಿಸ್ ಜಾರಿ ಮಾಡಿ ಹೇಳಿಕೆ ಪಡೆದುಕೊಂಡು ಬದಲು ಸಿಬ್ಬಂದಿಯನ್ನು ನೇಮಿಸಿ ಕಳುಹಿಸಿದ್ದು, ಸಿಬ್ಬಂದಿಯವರು ಆಕೆಯ ವಿಳಾಸಕ್ಕೆ ಹೋಗಿ ಪರಿಶೀಲಿಸಲಾಗಿ ಅವರು ಮನೆಗೆ ಬೀಗ ಹಾಕಿದ್ದು, ಯಾರೂ ಇಲ್ಲದ ಕಾರಣ ನೋಟಿಸ್ ಜಾರಿ ಮಾಡಲು ಹಾಗೂ ಹೇಳಿಕೆ ಪಡೆಯಲು ಸಾಧ್ಯವಾಗಿರುವುದಿಲ್ಲ ಎಂದು ವರದಿ ನೀಡಿರುತ್ತಾರೆ. ದಿನಾಂಕ 10-10-2020 ರಂದು ಮದ್ಯಾಹ್ನ 12-30 ಗಂಟೆಗೆ ಶ್ರೀಮತಿ ಪವಿತ್ರ ರವರ ಹೇಳಿಕೆ ಪಡೆಯಲು ನಾನೇ ಖುದ್ದು ಅವರ ವಿಳಾಸಕ್ಕೆ ಭೇಟಿ ನೀಡಿದ್ದು, ಅವರು ಮನೆಗೆ ಬೀಗ ಹಾಕಿದ್ದು, ಆಕೆಯ ಹೇಳಿಕೆ ಪಡೆಯಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಸದರಿ ಎಂ.ಎಲ್.ಸಿ. ಮೆಮೋ ಇನ್ನು ತನಿಖೆಯಲ್ಲಿರುತ್ತದೆ.

ಠಾಣಾ ಮೊ.ಸಂ. 188/2020 ಕಲಂ 341, 323, 427, 448, 504, 506 ರೆ/ವಿ 34 ಐ.ಪಿ.ಸಿ ಪ್ರಕರಣದಲ್ಲಿ ಶ್ರೀಮತಿ ನೇತ್ರಾವತಿ, ಶ್ರೀಮತಿ ಪವಿತ್ರ ಮತ್ತು ಶ್ರೀಮತಿ ನಾಗರತ್ನಮ್ಮ ರವರು ಆರೋಪಿಗಳಾಗಿದ್ದು ವಿಚಾರಣೆಗೆ ಹಾಜರಾಗಲು ಕಲಂ 41(ಎ) ಸಿ.ಆರ್.ಪಿ.ಸಿ ಪ್ರಕಾರ ನೋಟಿಸ್ ಜಾರಿ ಮಾಡಲು ದಿನಾಂಕ 25-11-2020, 05-12-2020, 28-01-2021 ರಂದು ಸಿಬ್ಬಂದಿಗಳನ್ನು ನೇಮಿಸಿದ್ದು, ಸಿಬ್ಬಂದಿಗಳು ವಿಳಾಸಕ್ಕೆ ಹೋಗಿ ನೋಡಲಾಗಿ ಆರೋಪಿಗಳು ಮನೆ ಬೀಗ ಹಾಕಿದ್ದು, ಪತ್ತೆಯಾಗಿರುವುದಿಲ್ಲ ಎಂದು ವರದಿ ನೀಡಿರುತ್ತಾರೆ. ನಂತರ ದಿನಾಂಕ 10-02-2021 ರಂದು ಮತ್ತೊಂದು ನೋಟಿಸ್ ನೀಡಿದ್ದು, ಸದರಿಯವರು ನೋಟಿಸ್ ಸ್ವೀಕರಿಸಿ ವಿಚಾರಣೆಗೆ

ಹಾಜರಾಗಿರುವುದಿಲ್ಲ. ನಂತರ ಮೊ.ಸಂ 188/2020 ಪ್ರಕರಣದಲ್ಲಿ ತನಿಖೆ ಪೂರ್ಣಗೊಳಿಸಿ ಆರೋಪಿಗಳು ಪತ್ತೆಯಾಗದ ಕಾರಣ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದು, ಮಾನ್ಯ ನ್ಯಾಯಾಲಯವು ಸಿಸಿ ನಂ 559/21 ರಲ್ಲಿ ವಿಚಾರಣೆ ಕೈಗೊಂಡು, ದಿನಾಂಕ 13-07-2021 ರಂದು ಲೋಕಾದಲತ್‌ನಲ್ಲಿ ಪಿರ್ಯಾದಿ ಮತ್ತು ಆರೋಪಿಗಳು ನ್ಯಾಯಾಲಯಕ್ಕೆ ಹಾಜರಾಗಿ ಪ್ರಕರಣವನ್ನು ರಾಜಿ ಮಾಡಿಕೊಂಡಿರುತ್ತಾರೆ. ನಮ್ಮ ಠಾಣಾ ಪ್ರಕರಣದಲ್ಲಿ ಶ್ರೀಮತಿ ನಾಗರತ್ನಮ್ಮ, ಅವರ ಮಕ್ಕಳಾದ ಶ್ರೀಮತಿ ನೇತ್ರಾವತಿ, ಶ್ರೀಮತಿ ಪವಿತ್ರ ರವರು ಆರೋಪಿಗಳಾಗಿದ್ದರಿಂದ ಪೊಲೀಸರು ನಮ್ಮನ್ನು ದಸ್ತಗಿರಿಮಾಡುತ್ತಾರೆಂದು ದುರುದ್ದೇಶದಿಂದ ಶ್ರೀಮತಿ ಪವಿತ್ರಾ ರವರು ಪಿ.ಎಸ್.ಐ. ಶ್ರೀಮತಿ ಮಂಜುಳ ರವರು ಹಲ್ಲೆ ಮಾಡಿರುತ್ತಾರೆಂದು ಸುಳ್ಳು ಆರೋಪ ಮಾಡಿ ತುಮಕೂರು ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆದಿರುತ್ತಾರೆ, ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಸಮಯದಲ್ಲಿ ಹೇಳಿಕೆ ನೀಡಲು ನಿರಾಕರಿಸಿರುತ್ತಾರೆ ನಂತರ ವಿಳಾಸದಲ್ಲಿಯೂ ಲಭ್ಯವಿಲ್ಲದೆ ಠಾಣೆಗೆ ಹಾಜರಾಗಿ ಯಾವುದೇ ಹೇಳಿಕೆ ನೀಡಿರುವುದಿಲ್ಲ ಸದರಿ ಎಂ.ಎಲ್.ಸಿ ಮೆಮೋ ತನಿಖಾ ಹಂತದಲ್ಲಿರುತ್ತದೆ ಎಂದು ಹೇಳಿಕೆಯನ್ನು ನೀಡಿರುತ್ತಾರೆ.

ದಾಖಲಾತಿಗಳನ್ನು ಪರಿಶೀಲಿಸಲಾಗಿ ದಿನಾಂಕ 05-10-2020 ರಂದು ಶ್ರೀಮತಿ ಪವಿತ್ರ ರವರ ಎಂ.ಎಲ್.ಸಿ. ಮೆಮೋವನ್ನು ಜಿಲ್ಲಾ ಆಸ್ಪತ್ರೆಯ ಹೊರಠಾಣೆಯ ಉಸ್ತುವಾರಿ ಅಧಿಕಾರಿ ಹೆಚ್.ಸಿ. ಶ್ರೀ ಕರೀಂ ಸಾಬ್ ರವರು ಅವರ ರಿಜಿಸ್ಟರ್‌ನಲ್ಲಿ ನಮೂದಿಸಿಕೊಂಡು ಕ್ಯಾತಸಂದ್ರ ಪೊಲೀಸ್ ಠಾಣೆಯ ಉಸ್ತುವಾರಿ ಅಧಿಕಾರಿ ಎ.ಎಸ್.ಐ ಶ್ರೀ ಸಿದ್ದಪ್ಪರವರಿಗೆ ತಿಳಿಸಿದ್ದಾಗಿ ನಮೂದಿಸಿರುವುದು ಹಾಗೂ ದಿನಾಂಕ 06-10-2020 ರಂದು ಬೆಳಗ್ಗೆ 11-20 ಗಂಟೆಗೆ ಪಿ.ಎಸ್.ಐ ಶ್ರೀ ರಾಮ್ ಪ್ರಸಾದ್ ರವರು ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ ಚಿಕಿತ್ಸೆ ಪಡೆಯುತ್ತಿದ್ದ ಪವಿತ್ರ ರವರಿಗೆ ಹೇಳಿಕೆ ನೀಡುವಂತೆ ಕೋರಿದ್ದು, ಅವರು ಹೇಳಿಕೆ ನೀಡಲು ನಿರಾಕರಿಸಿ, ವಕೀಲರ ಜೊತೆ ಚರ್ಚಿಸಿ ಠಾಣೆಗೆ ಬಂದು ದೂರು ನೀಡಿರುತ್ತೇನೆಂದು ತಿಳಿಸಿರುತ್ತಾರೆಂದು ಪಿ.ಎಸ್.ಐ ರವರು ಠಾಣಾ ದಿನಚರಿಯಲ್ಲಿ ನಮೂದಿಸಿರುತ್ತಾರೆ. ದಿನಾಂಕ 09-10-2020 ರಂದು ಶ್ರೀಮತಿ ಪವಿತ್ರ ರವರಿಗೆ ಎಂ.ಎಲ್.ಸಿ. ಮೆಮೋಗೆ ಸಂಬಂಧಿಸಿದಂತೆ ಹೇಳಿಕೆ ಪಡೆಯಲು ನೋಟಿಸ್ ನೀಡಿ ಅವರ ವಿಳಾಸಕ್ಕೆ ಸಿಬ್ಬಂದಿಯನ್ನು ಕಳುಹಿಸಿದ್ದು, ಅವರು ವಿಳಾಸದಲ್ಲಿ ಲಭ್ಯವಿರುವುದಿಲ್ಲ ಎಂದು ಠಾಣಾ ದಿನಚರಿಯಲ್ಲಿ ನಮೂದಿಸಿರುತ್ತಾರೆ. ನಂತರ ದಿನಾಂಕ 10-10-2020 ರಂದು 12-30 ಗಂಟೆಗೆ ಪಿ.ಎಸ್.ಐ ರಾಮ್ ಪ್ರಸಾದ್ ರವರು ಶ್ರೀಮತಿ ಪವಿತ್ರ ರವರ ವಿಳಾಸಕ್ಕೆ ಖುದ್ದು ಭೇಟಿ ನೀಡಿದ್ದು, ಶ್ರೀಮತಿ ಪವಿತ್ರ ರವರ ಮನೆಗೆ ಬೀಗ ಹಾಕಿದ್ದು, ವಿಳಾಸದಲ್ಲಿ ಲಭ್ಯವಿರುವುದಿಲ್ಲ ಎಂದು ಠಾಣಾ ದಿನಚರಿಯಲ್ಲಿ ನಮೂದಿಸಿರುತ್ತಾರೆ. ಹಾಗೂ ಕ್ಯಾತಸಂದ್ರ ಪೊಲೀಸ್ ಠಾಣೆ ಮೊ.ಸಂ 188/2020 ಕಲಂ 341, 323, 427, 448, 504, 506 ರೆ/ವಿ 34 ಐ.ಪಿ.ಸಿ ಪ್ರಕರಣದ ಕಡತಗಳನ್ನು ಪರಿಶೀಲಿಸಲಾಗಿ ಶ್ರೀಮತಿ ನೇತ್ರಾವತಿ, ಶ್ರೀಮತಿ ಪವಿತ್ರ ಮತ್ತು ಶ್ರೀಮತಿ ನಾಗರತ್ನಮ್ಮ ರವರಿಗೆ ವಿಚಾರಣೆಗೆ ಹಾಜರಾಗಲು ಕಲಂ. 41 (ಎ) ಸಿ.ಆರ್.ಪಿ.ಸಿ ಪ್ರಕಾರ ನೋಟಿಸ್ ಜಾರಿ ಮಾಡಲು ದಿನಾಂಕ 25-11-2020, 05-12-2020, 28-01-2021 ರಂದು ಸಿಬ್ಬಂದಿಗಳನ್ನು ನೇಮಿಸಿದ್ದು, ಸಿಬ್ಬಂದಿಗಳು ವಿಳಾಸಕ್ಕೆ ಹೋಗಿ ನೋಡಲಾಗಿ ಆರೋಪಿಗಳು ಮನೆಗೆ ಬೀಗ ಹಾಕಿದ್ದು, ಪತ್ತೆಯಾಗಿರುವುದಿಲ್ಲ ಎಂದು ವರದಿ ನೀಡಿರುತ್ತಾರೆಂದು ದಿನಾಂಕ 10-02-2021 ರಂದು ಮತ್ತೊಂದು

ನೋಟಿಸ್ ನೀಡಿದ್ದು, ಸದರಿಯವರು ನೋಟಿಸ್ ಸ್ವೀಕರಿಸಿ ವಿಚಾರಣೆಗೆ ಹಾಜರಾಗಿರುವುದಿಲ್ಲ ಎಂದು ಕೇಸ್ ಡೈರಿಗಳನ್ನು ನಮೂದಿಸಿರುವುದು ಕಂಡುಬಂದಿರುತ್ತದೆ.

ಎಲ್ಲಾ ಸಾಕ್ಷಿದಾರರ ಹೇಳಿಕೆ ಮತ್ತು ದಾಖಲಾತಿಗಳನ್ನು ಪರಿಶೀಲಿಸಲಾಗಿ ದಿನಾಂಕ 05-10-2020 ರಂದು ಸಂಜೆ ತುಮಕೂರು ಜಿಲ್ಲಾ ಆಸ್ಪತ್ರೆಯಿಂದ ಶ್ರೀಮತಿ ಪವಿತ್ರ ರವರಿಗೆ ಸಂಬಂಧಿಸಿದಂತೆ ಎಂ.ಎಲ್.ಸಿ. ಮೆಮೋವನ್ನು ಕ್ಯಾತಸಂದ್ರ ಪೋಲೀಸ್ ಠಾಣೆಯಲ್ಲಿ ಸ್ವೀಕರಿಸಿಕೊಂಡಿದ್ದು, ದಿನಾಂಕ 06-10-2020 ರಂದು ಪಿ.ಎಸ್.ಐ ಶ್ರೀ ರಾಮ್ ಪ್ರಸಾದ್ ರವರು ಆಸ್ಪತ್ರೆಗೆ ಭೇಟಿ ನೀಡಿ ಶ್ರೀಮತಿ ಪವಿತ್ರ ರವರಿಗೆ ಹೇಳಿಕೆ ನೀಡುವಂತೆ ಕೋರಿದ್ದು, ಆದರೆ ಅವರು ಹೇಳಿಕೆ ನೀಡದೇ ವಕೀಲರೊಂದಿಗೆ ಚರ್ಚಿಸಿ ದೂರು ನೀಡುವುದಾಗಿ ತಿಳಿಸಿರುತ್ತಾರೆಂದು ಹಾಗೂ ದಿನಾಂಕ 09-10-2020 ಮತ್ತು ದಿನಾಂಕ 10-10-2020 ರಂದು ಶ್ರೀಮತಿ ಪವಿತ್ರ ರವರ ವಿಳಾಸಕ್ಕೆ ಹೋಗಿ ನೋಡಲಾಗಿ ಅವರು ಮನೆಗೆ ಬೀಗ ಹಾಕಿದ್ದು, ವಿಚಾರಣೆಗೆ ಲಭ್ಯವಿರುವುದಿಲ್ಲ ಹಾಗೂ ಅವರು ಹೇಳಿಕೆ ನೀಡಲು ಠಾಣೆಗೆ ಬಂದಿರುವುದಿಲ್ಲ ಆದ್ದರಿಂದ ಸದರಿ ಎಮ್.ಎಲ್.ಸಿ ಮೆಮೋ ಇನ್ನು ತನಿಖಾ ಹಂತದಲ್ಲಿರುತ್ತದೆ ಎಂದು ಪಿ.ಎಸ್.ಐ ಶ್ರೀ ರಾಮ್ ಪ್ರಸಾದ್ ರವರು ಹೇಳಿಕೆ ನೀಡಿ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ."

ದೂರರ್ಜಿ, ವರದಿ, ಹೇಳಿಕೆಗಳು ಹಾಗೂ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಶ್ರೀಮತಿ ಸುಜಾತಾ ರವರು ನೀಡಿರುವ ದೂರರ್ಜಿಯನ್ನು ಕ್ಯಾತಸಂದ್ರ ಪೋಲೀಸ್ ಠಾಣೆಯಲ್ಲಿ ಎನ್.ಸಿ.ಆರ್ ನಂ. 560/2020 ರೀತ್ಯ ದೂರು ದಾಖಲಿಸಿಕೊಂಡು, ಶ್ರೀಮತಿ ಮಂಜುಳಾ ರವರು ಶ್ರೀಮತಿ ಸುಜಾತಾ ರವರ ಮನೆಗೆ ಹೋಗಿ ವಿಚಾರಣೆ ಮಾಡಿ ಹಾಗೂ ದೂರುದಾರರಾದ ಶ್ರೀಮತಿ ನೇತ್ರಾವತಿ ಮನೆಗೂ ಸಹ ಹೋಗಿ ದೂರುದಾರನ್ನು ಅವಾಚ್ಯ ಶಬ್ದಗಳಿಂದ ಬೈದು, ಠಾಣೆಗೆ ಬರುವಂತೆ ಬೆದರಿಕೆ ಹಾಕಿದ್ದು, ಶ್ರೀಮತಿ ನೇತ್ರಾವತಿ ರವರ ತಂಗಿ ಶ್ರೀಮತಿ ಪವಿತ್ರ ರವರ ಹೂವಿನ ಅಂಗಡಿ ಹತ್ತಿರ ಹೋಗಿ ಅವಾಚ್ಯ ಶಬ್ದಗಳಿಂದ ನಿಂದಿಸಿ ನೇತ್ರಾವತಿಗೆ ಮನೆ ಖಾಲಿ ಮಾಡುವಂತೆ ಹೇಳೆಂದು ಇಲ್ಲವಾದರೆ ನಿಮ್ಮ ಅಂಗಡಿಯನ್ನು ಮುಚ್ಚಿಸುತ್ತೇನೆ ಎಂದು ಬೆದರಿಕೆ ಹಾಕಿರುವುದು ದೂರುದಾರರ ತಾಯಿ ಶ್ರೀಮತಿ ನಾಗರತ್ನಾ ರವರ ಹೇಳಿಕೆಯಲ್ಲಿ ಕಂಡುಬರುತ್ತದೆ.

ದಿನಾಂಕ: 05.10.2020 ರಂದು ದೂರುದಾರರಾದ ಶ್ರೀಮತಿ ನೇತ್ರಾವತಿ ರವರನ್ನು ಕ್ಯಾತಸಂದ್ರ ಪಿ.ಎಸ್.ಐ ರಾದ ಶ್ರೀಮತಿ ಮಂಜುಳಾ ರವರು ಹೊಡೆದಿರುವುದು ಶ್ರೀಮತಿ ಮಂಜುಳಾ ರವರ ಹೇಳಿಕೆಯಲ್ಲಿ ಹಾಗೂ ಆಯೋಗದ ಡಿವೈ.ಎಸ್.ಪಿ ರವರು ಸಲ್ಲಿಸಿರುವ ಸಿಸಿಟಿವಿ ಪೂಟೇಜ್‌ನಿಂದ ಕಂಡುಬರುತ್ತದೆ. ಮುಂದುವರೆದು, ದಿನಾಂಕ: 05.10.2020 ರಂದು ಕ್ಯಾತಸಂದ್ರ ಪಿ.ಎಸ್.ಐ ರಾದ ಶ್ರೀಮತಿ ಮಂಜುಳಾ ರವರು ದೂರುದಾರರ ತಂಗಿಯಾದ ಶ್ರೀಮತಿ ಪವಿತ್ರ ರವರು ಗರ್ಭಿಣಿಯಾಗಿದ್ದರೂ ಸಹ ಅವರ ಮೇಲೆ ದೈಹಿಕ ಹಲ್ಲೆ ಮಾಡಿರುವುದು ಶ್ರೀಮತಿ ನಾಗರತ್ನ ರವರ ಹೇಳಿಕೆಯಲ್ಲಿ ಹಾಗೂ ಜಿಲ್ಲಾ ಆಸ್ಪತ್ರೆ ತುಮಕೂರು ಇವರು ನೀಡಿರುವ ಎಮ್.ಎಲ್.ಸಿ ಯಲ್ಲಿ ಕಂಡುಬರುತ್ತದೆ.

ದಿನಾಂಕ: 05.10.2020 ರಂದು ದೂರುದಾರರಾದ ಶ್ರೀಮತಿ ನೇತ್ರಾವತಿ, ತಾಯಿ ನಾಗರತ್ನ ಹಾಗೂ ತಂಗಿ ಪವಿತ್ರರವರು ಸಿ.ಪಿ.ಐ ಶ್ರೀ ಚನ್ನೇಗೌಡರವರ ಮುಂದೆ ಹಾಜರಾಗಿದ್ದು, ಸದರಿಯವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಅನುಚಿತವಾಗಿ ನಡೆದುಕೊಂಡಿರುವುದು ಶ್ರೀಮತಿ ನಾಗರತ್ನ ರವರ ಹೇಳಿಕೆಯಿಂದ ಕಂಡುಬರುತ್ತದೆ. ಮುಂದುವರೆದು, ಸಿ.ಪಿ.ಐ ಶ್ರೀ ಚನ್ನೇಗೌಡರವರು ಕ್ರೈಂ ಕಾನ್ಸ್‌ಟೇಬಲ್‌ರಾದ ಶ್ರೀ ರಮೇಶ್‌ರವರನ್ನು ದೂರುದಾರರ ಮನೆಗೆ ಕಳುಹಿಸಿ, ಶ್ರೀಮತಿ ನಾಗರತ್ನರವರ ಪತಿಗೆ ಬೆದರಿಗೆ ಹಾಕಿ ಮನೆ ಅಡ್ವಾನ್ಸ್ ರೂ. 10,000/– ಮಾತ್ರ ನೀಡಿರುವುದಾಗಿ ಹೇಳುವಂತೆ ತಿಳಿಸಿರುವುದು ಶ್ರೀಮತಿ ನಾಗರತ್ನ ರವರ ಹೇಳಿಕೆಯಿಂದ ಕಂಡುಬರುತ್ತದೆ.

ಒಟ್ಟಾರೆಯಾಗಿ, ಕ್ಯಾತಸಂದ್ರ ಪಿ.ಎಸ್.ಐ ರಾದ ಶ್ರೀಮತಿ ಮಂಜುಳಾ ರವರು ಎನ್.ಸಿ.ಆರ್ ಪ್ರಕರಣದಲ್ಲಿ ನ್ಯಾಯಾಲಯದ ಆದೇಶವಿಲ್ಲದೇ ಸ್ವಯಂ ಪ್ರೇರಿತವಾಗಿ ಹಾಗೂ ಯಾವುದೇ ಅಧಿಕಾರವಿಲ್ಲದಿದ್ದರೂ ಸಹ ವಿಚಾರಣೆ ಮಾಡಿದ್ದು, ದೂರುದಾರರನ್ನು ಹೊಡೆದಿದ್ದು, ದೂರುದಾರರಾದ ಸಹೋದರಿಯಾದ ಶ್ರೀಮತಿ ಪವಿತ್ರ ರವರ ಮೇಲೆ ದೈಹಿಕ ಹಲ್ಲೆ ಮಾಡಿರುವುದು ಹಾಗೂ ಸಿ.ಪಿ.ಐ ಶ್ರೀ ಚನ್ನೇಗೌಡ ರವರು ದೂರುದಾರರನ್ನು, ಅವರ ತಾಯಿ ನಾಗರತ್ನ ಹಾಗೂ ಅವರ ತಂಗಿ ಪವಿತ್ರ ರವರಿಗೆ ಅವಾಚ್ಯ ಶಬ್ಧಗಳಿಂದ ನಿಂದಿಸಿ ಅನುಚಿತವಾಗಿ ನಡೆದುಕೊಂಡಿರುವುದು ಹಾಗೂ ಶ್ರೀಮತಿ ನಾಗರತ್ನ ರವರ ಗಂಡನಿಗೆ ಬೆದರಿಕೆ ಹಾಕುವಂತೆ ಕ್ರೈಂ ಕಾನ್ಸ್‌ಟೇಬಲ್ ಶ್ರೀ ರಮೇಶ್ ರವರನ್ನು ದೂರುದಾರರ ಮನೆಗೆ ಕಳುಹಿಸಿರುವುದು ಕಂಡು ಬಂದ ಕಾರಣ, ಈ ಕೆಳಕಂಡಂತೆ ಶಿಫಾರಸ್ಸು ಮಾಡಲಾಗಿದೆ:

1. ದೂರರ್ಜಿದಾರರಾದ ಶ್ರೀಮತಿ ನೇತ್ರಾವತಿ ರವರಿಗೆ ರೂ. 50,000/– (ಐವತ್ತು ಸಾವಿರ ರುಪಾಯಿಗಳು) ಗಳನ್ನು ಪರಿಹಾರ ರೂಪದಲ್ಲಿ ಒಂದು ತಿಂಗಳೊಳಗಾಗಿ ಸರ್ಕಾರದಿಂದ ನೀಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಇವರಿಗೆ ಶಿಫಾರಸ್ಸು ಮಾಡಲಾಗಿದೆ ಮತ್ತು ಈ ಪ್ರಕರಣದ ಘಟನೆಯ ಬಗ್ಗೆ ಅಂದಿನ ಕ್ಯಾತಸಂದ್ರ ಪೊಲೀಸ್ ಠಾಣೆಯ ಪಿ.ಎಸ್.ಐ ರಾದ ಶ್ರೀಮತಿ ಮಂಜುಳಾ (ಹಾಲಿ ಕೋರಟಗೇರೆ ಪೊಲೀಸ್ ಠಾಣೆ, ತುಮಕೂರು) ರವರ ಮೇಲೆ ಕೆಎಸ್‌ಪಿ (ಡಿಪಿ) ನಿಯಾಮವಳಿ 1965 ರ ಅನ್ವಯ ಇಲಾಖಾ ವಿಚಾರಣೆ ಮಾಡಿ, ಅಗತ್ಯ ಕ್ರಮ ವಿಧಿಸುವಂತೆ ಶಿಫಾರಸ್ಸು ಮಾಡಲಾಗಿದೆ. ನಂತರ ವಿಚಾರಣೆಯ ತೀರ್ಪಿಗೊಳಪಟ್ಟ ಅಂದಿನ ಕ್ಯಾತಸಂದ್ರ ಪೊಲೀಸ್ ಠಾಣೆಯ ಪಿ.ಎಸ್.ಐ ರಾದ ಶ್ರೀಮತಿ ಮಂಜುಳಾ (ಹಾಲಿ ಕೋರಟಗೇರೆ ಪೊಲೀಸ್ ಠಾಣೆ, ತುಮಕೂರು) ರವರ ವೇತನದಿಂದ ಪರಿಹಾರ ನೀಡಿದ ಹಣವನ್ನು ವಸೂಲಿ ಮಾಡಿಕೊಳ್ಳುವ ಬಗ್ಗೆ ಪರಿಶೀಲಿಸತಕ್ಕದ್ದು.
2. ಮೇಲ್ಕಂಡ ಅಂಶಗಳಿಂದ, ಕ್ಯಾತಸಂದ್ರ ಪೊಲೀಸ್ ಠಾಣೆಯ ಸಿ.ಪಿ.ಐ ಶ್ರೀ ಚನ್ನೇಗೌಡ ರವರ ಮೇಲೆ ಅಗತ್ಯ ಕ್ರಮ ಕೈಗೊಳ್ಳುವಂತೆ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು ರವರಿಗೆ ಶಿಫಾರಸ್ಸು ಮಾಡಲಾಗಿದೆ.

ಆದೇಶದ ಪ್ರತಿಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಹಾಗೂ *ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು* ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸುವುದು.

ಮೇಲ್ಕಂಡ ಶಿಫಾರಸ್ಸನ್ನು ಮಾನವ ಹಕ್ಕುಗಳ ರಕ್ಷಣಾ ಅಧಿನಿಯಮ 1993, ಕಲಂ 18(ಇ) ಪ್ರಕಾರ ಶಿಫಾರಸ್ಸಿನ ಪ್ರತಿ ತಲುಪಿದ ಒಂದು ತಿಂಗಳ ಒಳಗಾಗಿ ಅನುಪಾಲನಾ ವರದಿಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಹಾಗೂ *ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು* ರವರು ಆಯೋಗಕ್ಕೆ ಸಲ್ಲಿಸತಕ್ಕದ್ದು ಮತ್ತು ಶಿಫಾರಸ್ಸಿನಿಂದ ಬಾಧಿತರಾದ ಪೊಲೀಸ್ ಸಿಬ್ಬಂದಿರವರು ನಿಯಮ 22 ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ (ಪ್ರಕ್ರಿಯೆ) ನಿಯಮಾವಳಿ 2020 ರಂತೆ ಅಭಿಪ್ರಾಯ/ಶಿಫಾರಸ್ಸನ್ನು ತಿದ್ದುಪಡಿಗೆ ಅಥವಾ ಮರು ಪರಿಶೀಲನೆಗೆ ಅರ್ಜಿಯನ್ನು ಆಯೋಗಕ್ಕೆ ಸಲ್ಲಿಸಿದರೆ ಅದನ್ನು ನಿಯಮಾನುಸಾರ ಪರಿಶೀಲನೆ ಮಾಡಲಾಗುವುದೆಂದು ಅಭಿಪ್ರಾಯ/ಶಿಫಾರಸ್ಸು ಮಾಡಲಾಗಿದೆ.

ಪ್ರಕರಣವನ್ನು ದಿನಾಂಕ: 15.06.2022 ರಂದು ಅನುಪಾಲನಾ ವರದಿಗಾಗಿ ಮಂಡಿಸುವುದು.

Sd/-

(ಆರ್. ಕೆ. ದತ್ತ)

ಸದಸ್ಯರು

ಜಿ.ಎಸ್.